School Leadership

TESS India

# Orientation: the secondary school leader as enabler

## ಪರಿಚಯ: ಪ್ರೌಢಶಾಲಾ ನಾಯಕ/ಕಿ ಒಬ್ಬ ಸಾಧ್ಯವಾಗಿಸುವವರಾಗಿ/ ಪ್ರೋತ್ಸಾಹಕಾರರಾಗಿ (enabler)





Teacher Education through School-based Support in India
www.TESS-India.edu.in

http://creativecommons.org/licenses/

ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಈ **ಮುಕ್ತ ಶೈಕ್ಷಣಿಕ ಸಂಪನ್ಮೂಲವೂ (Open Educational Resource-OER)** ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯಲ್ಲಿ ಸುಧಾರಣೆ ತರುವ ಬಗ್ಗೆ ನಾಯಕತ್ವ ವಹಿಸಲು ಇಚ್ಛಿಸುವವರಿಗೆ, ಅದಕ್ಕೆ ಪೂರಕವಾಗಿ ಮಾಹಿತಿ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಸಹಾಯವಾಗುವಂತೆ **ಟೆಸ್-ಇಂಡಿಯಾ ಸಂಸ್ಥೆ** ರೂಪಿಸಿರುವ 20 ಘಟಕಗಳಲ್ಲಿ ಒಂದು. ಶಾಲೆಯಲ್ಲಿ ಶಿಕ್ಷಕರು, ವಿದ್ಯಾರ್ಥಿಗಳ ಹಾಗೂ ಇತರರ ಭಾಗವಹಿಸುವಿಕೆಯಿಂದ ನಡೆಸಬಹುದಾದ ಚಟುವಟಿಕೆಗಳನ್ನು ಒಳಗೊಂಡಿರುವ, ಅವಶ್ಯವಾಗಿ ಪ್ರಯೋಗಿಸಬಹುದಾದ ಘಟಕಗಳನ್ನು ಇದು ಹೊಂದಿದೆ. ಯಶಸ್ವಿ ಶಾಲೆಗಳಲ್ಲಿ ನಡೆಸಲಾದ ಶೈಕ್ಷಣಿಕ ಅಧ್ಯಯನ ಹಾಗೂ ಸಂಶೋಧನೆಗಳನ್ನು ಇದು ಆಧರಿಸಿದೆ.

ಈ ಘಟಕಗಳನ್ನು ಅಧ್ಯಯನ ಮಾಡಲು ಯಾವುದೇ ನಿರ್ದಿಷ್ಟ ಕ್ರಮ ಅನುಸರಿಸಬೇಕಿಲ್ಲವಾದರೂ, ಅನುಕೂಲಿಸುವವರಾಗಿ (enabler) **'ಶಾಲಾ ಮುಖ್ಯಸ್ಥ'** ಎಂಬ ಘಟಕದಿಂದ ಪ್ರಾರಂಭಿಸುವುದು ಸೂಕ್ತ. ಏಕೆಂದರೆ, ಇದು ಇಡೀ ಕೈಪಿಡಿಗೆ ಒಂದು ನಿರ್ದಿಷ್ಟ ನಿರ್ದೇಶನ ನೀಡುತ್ತದೆ. ಕೆಲವು ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ ಘಟಕಗಳನ್ನು ಬೇರ್ಪಡಿಸಿ ಅಧ್ಯಯನ ಮಾಡಲು ನೀವು ಆಯ್ಕೆ ಮಾಡಿಕೊಳ್ಳಬಹುದು. **ರಾಷ್ಟ್ರೀಯ ಶಾಲಾ ನಾಯಕತ್ವದ ಪಠ್ಯಕ್ರಮದ ನೆಲೆಗಟ್ಟು (National School leadership Curriculum Framework-India)** ಗುರುತಿಸಿರುವ ಶಾಲಾ ನಾಯಕತ್ವದ ಯಥಾರ್ಥದರ್ಶನ (1), ಸ್ವಯಂ ಅಭಿವೃದ್ಧಿ ಹಾಗೂ ನಿರ್ವಹಣೆ (2), ಬೋಧನೆ-ಕಲಿಕೆ ಪ್ರಕ್ರಿಯೆಗಳಲ್ಲಿ ಪರಿವರ್ತನೆ (3) ಹಾಗೂ ಪಾಲುದಾರಿಕೆಯಲ್ಲಿ ಅಗ್ರಗಾಮಿ (6)- ಈ ಪ್ರಮುಖ ಕ್ಷೇತ್ರಗಳನ್ನು ನಾವೀನ್ಯತೆ ಹಾಗೂ ತಂಡಗಳನ್ನು ಮುನ್ನಡೆಸುವುದಕ್ಕೆ ಸಂಬಂಧಿಸಿದ (4) ಮತ್ತು (5)ನೇ ಕ್ಷೇತ್ರಗಳನ್ನು ಕೇಂದ್ರೀಕರಿಸದೆ, ವಿವಿಧ ಘಟಕಗಳಲ್ಲಿ ಮಿಳಿತಗೊಳಿಸಲಾಗಿದೆ. ಕೆಲವು ಘಟಕಗಳಲ್ಲಿ ಒಂದಕ್ಕಿಂತ ಹೆಚ್ಚು ಕ್ಷೇತ್ರಗಳನ್ನು ವಿವರಿಸಲಾಗಿದೆ.

ಶಾಲೆಯ ಮುಖ್ಯಸ್ಥರು ಈ ಘಟಕಗಳನ್ನು ಸ್ವಅಧ್ಯಯನಕ್ಕಾಗಿ ಇಲ್ಲವೇ ನಾಯಕತ್ವ ಬೋಧನೆ ಕಾರ್ಯಕ್ರಮದ ಭಾಗವಾಗಿ ಬಳಸಬಹುದು. ಎರಡೂ ವಿಧಾನಗಳಲ್ಲಿ ಚಟುವಟಿಕೆಗಳನ್ನು ಹಾಗೂ ವಸ್ತುಸ್ಥಿತಿ ಅಧ್ಯಯನಗಳನ್ನು ಹಾಗೂ ಕಲಿಕೆಯ ಅನುಭವಗಳನ್ನು ಇತರರೊಡನೆ ಹಂಚಿಕೊಳ್ಳುವ ದೃಷ್ಟಿಯಿಂದ, ವೈಯುಕ್ತಿಕವಾಗಿ ಒಂದು ಕಲಿಕಾ ಡೈರಿಯನ್ನು ಇಟ್ಟುಕೊಳ್ಳುವುದು ಉಪಯುಕ್ತವಾಗುತ್ತದೆ. ಇಲ್ಲಿ ಬಳಸಲಾಗಿರುವ **'ಶಾಲಾಮುಖ್ಯಸ್ಥ'** ಅಥವಾ **'ಶಾಲಾ ನಾಯಕ'** ಎಂಬ ಪದವು ಕೇವಲ ಮುಖ್ಯ ಶಿಕ್ಷಕ ಅಥವಾ ಪ್ರಿನ್ಸಿಪಾಲರು ಮಾತ್ರವಲ್ಲದೆ, ಶಾಲೆಯಲ್ಲಿ ನಾಯಕತ್ವದ ಜವಾಬ್ದಾರಿಯನ್ನು ಹೊರಲು ಸಿದ್ಧವಿರುವ ಯಾವುದೇ ವ್ಯಕ್ತಿಗೆ ಅನ್ವಯಿಸುತ್ತದೆ.

**ವೀಡಿಯೋ ಸಂಪನ್ಮೂಲಗಳು**

ಎಂಬ ಗುರುತು **ಟೆಸ್-ಇಂಡಿಯಾ** ನಾಯಕತ್ವದ ವೀಡಿಯೋ ಸಂಪನ್ಮೂಗಳನ್ನು ಸೂಚಿಸುತ್ತದೆ. ಇವುಗಳಲ್ಲಿ ಭಾರತೀಯ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಗಳಲ್ಲಿ ಬೋಧನೆ ಹಾಗೂ ಕಲಿಕೆಯಲ್ಲಿ ಬದಲಾವಣೆ ತರಲು ತಾವು ನಡೆಸಿದ ಪ್ರಯತ್ನಗಳ ಬಗ್ಗೆ ಹೇಳಿಕೊಂಡಿದ್ದಾರೆ. ಅಂಥದ್ದೇ ಕಾರ್ಯಕ್ರಮಗಳನ್ನು ನೀವೂ ಪ್ರಯೋಗಿಸುವ ನಿಟ್ಟಿನಲ್ಲಿ ಈ ವೀಡಿಯೊಗಳು ನಿಮಗೆ ಸ್ಫೂರ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿದೆ. ಈ ವೀಡಿಯೊಗಳು ಪಠ್ಯದಲ್ಲಿ ನೀಡಲಾಗಿರುವ ಮಾಹಿತಿಗಳಿಗೆ ಪೂರಕವಾಗಿದ್ದು ನಿಮಗೆ ನೆರವಾಗುತ್ತವೆಯಾದರೂ, ಅವುಗಳ ನೆರವು ದೊರಕದೇ ಹೋದರೂ ಸಮಸ್ಯೆ ಯಾಗದಂತೆ ಅವಶ್ಯಕ ಮಾಹಿತಿಯನ್ನು ಪಠ್ಯದಲ್ಲಿ ಸೇರಿಸಲಾಗಿದೆ.

ಟೆಸ್ ಇಂಡಿಯಾ ವೀಡಿಯೋ ಸಂಪನ್ಮೂಲಗಳನ್ನು http://www.tess-india.edu.in ಎಂಬ ವೆಬ್‌ಸೈಟ್‌ನಲ್ಲಿ ನೇರವಾಗಿ ನೋಡಬಹುದು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇಲ್ಲವೇ ಮೆಮೋರಿ ಕಾರ್ಡ್ ಅಥವಾ ಸಿಡಿಯ ಮೂಲಕ ಪಡೆಯಬಹುದು.

**ಟೆಸ್-ಇಂಡಿಯಾ (Teacher Education through School based Support) ಯೋಜನೆಯ** ಬಗ್ಗೆ

ವಿದ್ಯಾರ್ಥಿ-ಕೇಂದ್ರಿತ ಹಾಗೂ ವಿದ್ಯಾರ್ಥಿಗಳನ್ನು ಒಳಗೊಂಡ ಕಲಿಕಾ ಪದ್ಧತಿಯನ್ನು ಅಭಿವೃದ್ಧಿ ಪಡಿಸಿಕೊಳ್ಳಲು ಮುಕ್ತ ಶೈಕ್ಷಣಿಕ ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪ್ರಾಥಮಿಕ ಹಾಗೂ ಪ್ರೌಢಶಾಲಾ ಹಂತದ ಶಿಕ್ಷಕರಿಗೆ ಮತ್ತು ಶಾಲಾ ಮುಖ್ಯಸ್ಥರಿಗೆ ನೆರವಾಗುವುದು **ಟೆಸ್-ಇಂಡಿಯಾದ** ಉದ್ದೇಶ. ಭಾಷೆ, ವಿಜ್ಞಾನ ಹಾಗೂ ಗಣಿತ ಕಲಿಕೆಯಲ್ಲಿ ಪಠ್ಯಪುಸ್ತಕಕ್ಕೆ ಪೂರಕವಾಗಿ ಸಿದ್ಧಪಡಿಸಲಾರುವ **105 ಟೆಸ್-ಇಂಡಿಯಾ ಒಇಆರ್(OER)ಗಳು** ಈ ನಿಟ್ಟಿನಲ್ಲಿ ಶಿಕ್ಷಕರಿಗೆ ನೆರವಾಗಲಿವೆ. ತಮ್ಮ ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ಮಾಡಿ ತೋರಿಸಬಹುದಾದ ಚಟುವಟಿಕೆಗಳನ್ನು ಒದಗಿಸುವುದರ ಜೊತೆಗೆ, ಬೇರೆ ಬೇರೆ ಶಾಲೆಗಳಲ್ಲಿ ಶಿಕ್ಷಕರು ಹೇಗೆ ಈ ವಿಧಾನವನ್ನು ಅನುಸರಿಸುತ್ತಿದ್ದಾರೆ ಎಂಬ ವಸ್ತುಸ್ಥಿತಿ ಅಧ್ಯಯನಗಳನ್ನೂ ಇವು ಒಳಗೊಂಡಿವೆ. ಅಲ್ಲದೆ, ತಮ್ಮ ವಿಷಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಹಾಗೂ ಪಾಠಯೋಜನೆಗಳನ್ನು ರಚಿಸಲು ಶಿಕ್ಷಕರಿಗೆ ನೆರವಾಗುವ ಸಂಪನ್ಮೂಲಗಳ ಮಾಹಿತಿ ಕೊಂಡಿ (link)ಗಳನ್ನು ಒಳಗೊಂಡಿದೆ.

ನಮ್ಮ ದೇಶದ ಪಠ್ಯಕ್ರಮವನ್ನು ಅನುಸರಿಸಿ, ಭಾರತೀಯ ಹಾಗೂ ಅಂತರರಾಷ್ಟ್ರೀಯ ಲೇಖಕರಿಂದ ಸಂಯುಕ್ತವಾಗಿ ಸಿದ್ಧಪಡಿಸಲಾಗಿರುವ ಈ ಸಂಪನ್ಮೂಲಗಳು **http://tess-indiaedu.in** ವೆಬ್‌ಸೈಟಿನಲ್ಲಿ ಅಧ್ಯಯನ ಮಾಡಲು ಇಲ್ಲವೇ ಡೌನ್‌ಲೋಡ್ ಮಾಡಿಕೊಳ್ಳಲು ಮುಕ್ತವಾಗಿ ದೊರಕುತ್ತವೆ. ಭಾರತದ ವಿವಿಧ ರಾಜ್ಯಗಳ ಬಳಕೆದಾರರಿಗೆ ಅನುಕೂಲವಾಗುವಂತೆ ಸಂಪನ್ಮೂಲ ವಿವಿಧ ವರ್ಷನ್‌ಗಳನ್ನು ಹೊಂದಿದೆ. ಸ್ಥಳೀಯ ಮಾಹಿತಿ ಹಾಗೂ ಅವಶ್ಯಕತೆಗಳಿಗೆ ಅನುಗುಣವಾಗಿ ಸಂಪನ್ಮೂಲಗಳನ್ನು ಹೊಂದಿಸಿಕೊಳ್ಳುವಂತೆ ಶಿಕ್ಷಕರನ್ನು ಕೋರಲಾಗಿದೆ. ಯುಕೆ ಸರ್ಕಾರದ ಅನುದಾನದಲ್ಲಿ, ಯುಕೆಯ ಮುಕ್ತವಿಶ್ವವಿದ್ಯಾಲಯದಲ್ಲಿ **ಟೆಸ್-ಇಂಡಿಯಾ** ರೂಪುಗೊಂಡಿದೆ.

*Version 2.0 SL18v1*
*Karnataka*

*Except for third party materials and othe errw wise stated, this content is made available unde err a Creative Commons Attribution-ShareAlike licence: http://creaat tivecommons.org/licenses/by-sa/3.0/*

*TESS-India is led by The Open University UK and funded by UK aid from the UK government*

# ಈ ಘಟಕದಲ್ಲೇನಿದೆ?

ಇತ್ತೀಚಿನ ದಿನಗಳಲ್ಲಿ ಭಾರತದಲ್ಲಿ ಶಿಕ್ಷಣದ ನೀತಿಯಲ್ಲಿ ಬಹಳಷ್ಟು ಬದಲಾವಣೆಗಳನ್ನು ಕಾಣುತ್ತಿದ್ದೇವೆ.ಆದರೆ ಅವುಗಳಲ್ಲಿ ಬಹಳ ಪ್ರಾಮುಖ್ಯವಾದುದೆಂದರೆ ಶಾಲೆಗಳಿಂದ ನಿರೀಕ್ಷೆಗಳು ಹೆಚ್ಚಾಗಿವೆ. ಶಾಲೆಗಳಿಗೆ ಹೆಚ್ಚು ಹೆಚ್ಚು ಸ್ವಾಯತ್ತತೆ ಮತ್ತು ಸ್ಥಳೀಯ ಸಮುದಾಯಗಳೊಂದಿಗೆ ಪ್ರತಿಕ್ರಿಯಾತ್ಮಕತೆ, ಮತ್ತು ಶಾಲಾ ನಾಯಕರು ತಮ್ಮ ಶಾಲೆಗಳಲ್ಲಿ ಗುಣಮಟ್ಟದ ಕಲಿಕೆ ಮತ್ತು ಬೋಧನೆಯಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ವಹಿಸಬೇಕಾಗಿರುವುದು ಬಲವಾದ ಆಸೆಯಾಗಿದೆ(ತ್ಯಾಗಿ,2011).

ಟೆಸ್ ಇಂಡಿಯಾದ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs) ದ ಉದ್ದೇಶವು ಶಾಲಾ ನಾಯಕರನ್ನು ಉತ್ತೇಜಿಸುವುದು ಮತ್ತು ಅದರ ಮೂಲಕ ತಮ್ಮ ಶಾಲೆಗಳಲ್ಲಿ ಹೆಚ್ಚು ಚಲನಶೀಲವಾದ ಕಲಿಕಾ ವಾತಾವರಣವನ್ನು ನಿರ್ಮಿಸಿ ಕ್ರಿಯಾಶೀಲವಾದ ಮಕ್ಕಳು ಮತ್ತು ಪ್ರತಿಕ್ರಿಯಾತ್ಮಕ ಶಿಕ್ಷಕರನ್ನು ನಿರ್ಮಿಸುವುದಾಗಿದೆ. ಶಾಲಾ ನಾಯಕರು ತಮ್ಮ ಶಾಲಾ ವ್ಯಾಪ್ತಿಯಲ್ಲಿ ಸಾಕಷ್ಟು ಹತೋಟಿಯನ್ನು ಹೊಂದಿದ್ದಾಗ್ಯೂ,ಸದ್ಯ ಅಸ್ತಿತ್ವದಲ್ಲಿರದ ಈ ಕಾರ್ಯವನ್ನು ಜಾರಿಯಲ್ಲಿ ತರುವುದು ತೀರಾ ಸವಾಲಿನ ಕಾರ್ಯವಾಗಿದೆ.ಈ ಘಟಕವು ಶಾಲಾ ನಾಯಕರನ್ನು ಸಮರ್ಥರನ್ನಾಗಿ ರೂಪಿಸುತ್ತದೆ ಮತ್ತು ತಮ್ಮ ಶಾಲೆಗಳಲ್ಲಿ ಪರಿಣಾಮಕಾರಿ ಪಾತ್ರ ನಿರ್ವಹಣೆಗೂ ಸಹಕರಿಸುತ್ತದೆ. ಟೆಸ್ ಇಂಡಿಯಾದ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs) ಗಳು ಸಾಮಗ್ರಿ ಪೆಟ್ಟಿಗೆ ('ಟೂಲ್ ಕಿಟ್ ') ಆಗಿ ಕಾರ್ಯ ನಿರ್ವಹಿಸುತ್ತವೆ.(ಹೆಚ್ಚಿನ ಮಾಹಿತಿಗಾಗಿ ಸಂಪನ್ಮೂಲ 1 ನ್ನು ನೋಡಿ.)

ಮೊದಲ ಪುನಶ್ಚೇತನ ಘಟಕವು ಸ್ವಂತದ ಬೆಳವಣಿಗೆಗೆ ಟೆಸ್ ಇಂಡಿಯಾದ ಶಾಲಾ ನಾಯಕತ್ವದ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs) ಗಳನ್ನು ಹೇಗೆ ಬಳಸಬಹುದೆಂಬುದನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿದೆ. ಈ ಎಲ್ಲಾ ಸಂಪನ್ಮೂಲಗಳ ಆಶಯವು ಕಲಿಕೆ ಜೀವನ ಪೂರ್ತಿ ಮತ್ತು ನಿರಂತರ : ಶಿಕ್ಷಕರು ಪರಿಣಾಮಕಾರಿಯಾಗಿ ಕಲಿಯುವುದು ಮತ್ತು ಅದೇ ಶಾಲಾ ನಾಯಕರನ್ನು ಸಹ ಕಲಿಕಾದಾರರನ್ನಾಗಿಸುವುದೇ ಆಗಿದೆ.

# ಕಲಿಕಾ ದಿನಚರಿ/ಡೈರಿ

ಈ ಘಟಕದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ವೇಳೆ ನಿಮ್ಮ ಕಲಿಕಾ ದಿನಚರಿಯಲ್ಲಿ ಟಿಪ್ಪಣಿಯನ್ನು ನಮೂದಿಸಬೇಕಾಗುತ್ತದೆ. ನಿಮ್ಮ ವಿಚಾರ ಮತ್ತು ಯೋಜನೆಗಳನ್ನು ಒಂದು ಕಡೆ ಸಂಗ್ರಹಿಸಿ ಪುಸ್ತಕ ಅಥವಾ ಫೋಲ್ಡರ್‌ದಲ್ಲಿ ಇಡಬೇಕಾಗುತ್ತದೆ. ಬಹುಶಃ ಈಗಾಗಲೇ ಒಂದನ್ನು ಪ್ರಾರಂಭಿಸಿದ್ದೀರಾ.ಈ ಘಟಕದೊಂದಿಗೆ ಮಾತ್ರ ನೀವು ಕಾರ್ಯ ನಿರ್ವಹಿಸುತ್ತಿದ್ದೀರಾ.ಆದರೆ ನೀವು ನಿಮ್ಮ ಕಲಿಕೆಯನ್ನು ಮತ್ತೊಂದು ಶಾಲೆಯ ನಾಯಕರೊಂದಿಗೆ ಚರ್ಚಿಸಿದಲ್ಲಿ ನೀವು ಹೆಚ್ಚಿನ ಕಲಿಕೆಯನ್ನು ಹೊಂದುವಿರಿ.ಈ ಪ್ರಯತ್ನವು ನೀವು ಈಗಾಗಲೇ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯ ಜೊತೆ ಅಥವಾ ಹೊಸ ಸಂಬಂಧವನ್ನು ಹೊಂದಬೇಕಾದವರ ಜೊತೆ ಆಗಲಿ.ಇದು ಸಂಘಟಿತ ರೀತಿಯಲ್ಲಿ ಅಥವಾ ತುಂಬಾ ಅನೌಪಚಾರಿಕ ರೀತಿಯಲ್ಲಿ ನಡೆಯಬೇಕಾಗುತ್ತದೆ.ಕಲಿಕಾ ದಿನಚರಿಯಲ್ಲಿ ನಮೂದಿಸಿದ ಟಿಪ್ಪಣೆಗಳು ಈ ರೀತಿಯ ಸಭೆಗಳಿಗೆ ಮತ್ತು ನಿಮ್ಮ ದೀರ್ಘಕಾಲೀನ ಕಲಿಕೆ ಮತ್ತು ಬೆಳವಣಿಗೆಗಳನ್ನು ನಕ್ಷೆ ಮಾಡಲು ಸಹಕಾರಿಯಾಗುತ್ತದೆ..

# ಈ ಘಟಕದಿಂದ ಏನನ್ನು ಕಲಿಯುವಿರಿ

- ನಿಮ್ಮ ಶಾಲೆಯ ನಾಯಕತ್ವದ ಕೌಶಲಗಳನ್ನು ಪರಿಶೀಲಿಸುವಿರಿ ಮತ್ತು ಸುದಾರಣೆಯ ಕ್ಷೇತ್ರಗಳನ್ನು ಗುರುತಿಸುವಿರಿ.
- ಟೆಸ್ ಇಂಡಿಯಾದ ಶಾಲಾ ನಾಯಕತ್ವದ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs) ಗಳು ನಿಮ್ಮ ಕಲಿಕಾ ಮಾರ್ಗಗಳನ್ನು ಸಂರಚಿಸಿ, ನಿಮ್ಮ ಶಾಲಾ ನಾಯಕತ್ವದ ಕೌಶಲಗಳನ್ನು ವೃದ್ಧಿಸಲು ಉಪಯೋಗಿಸುವಿರಿ.
- ನಿಮ್ಮ ಶಾಲೆಗಳಲ್ಲಿ ಕಲಿಕೆಯಲ್ಲಿ ಸಮರ್ಥರನ್ನಾಗಿಸುವುದು ಎಂದರೆ ಏನು ಎಂಬುದನ್ನು ಅರ್ಥೈಸಿಕೊಳ್ಳುವರು.

# 1. ಭಾರತದಲ್ಲಿ ಶಾಲಾ ನಾಯಕರಾಗಿ

ಶಿಕ್ಷಣ ಹಕ್ಕು ಮಸೂದೆ (ಆರ್.ಟಿ.ಇ.)2009 ಭಾರತದ ಶಾಲೆಗಳಿಗೆ ಈ ಹಿಂದಿಗಿಂತಲೂ ಹೆಚ್ಚು ಸ್ವಾಯತ್ತತೆಯನ್ನು ನೀಡಿದೆ.ಇದು ಈಗಾಗಲೇ ಹೆಚ್ಚಿನ ದೇಶಗಳಲ್ಲಿ ನಡೆದಿದ್ದು ಶಾಲಾ ನಾಯಕರು ಕೆಲವೊಮ್ಮೆ ತಮ್ಮ ಆಯವ್ಯಯದ ಬಗ್ಗೆ ತಾವೇ ಜವಾಬ್ದಾರಿಯಿಂದ ನಿರ್ವಹಿಸುವುದು, ತಮ್ಮ ಶಾಲೆಯ ಶಿಕ್ಷಕರನ್ನು ತಾವೇ ನೇಮಕಾತಿ ಮಾಡುವ ಅಧಿಕಾರ, ಅಲ್ಲದೇ ತಮ್ಮ ಪಠ್ಯಕ್ರಮವನ್ನು ತಾವೇ ನಿರ್ಧರಿಸಲು ಸಮರ್ಥರನ್ನಾಗಿಸುವುದು.ಈ ಬದಲಾವಣೆ ಹೆಚ್ಚು ಜವಾಬ್ದಾರಿಯನ್ನು ನೀಡಿದರೂ ಹೆಚ್ಚು ಸ್ವಾತಂತ್ರ್ಯವನ್ನೂ ನೀಡುತ್ತದೆ. ಶಾಲಾ ನಾಯಕರು ತಮ್ಮ ಶಾಲಾ ಸುದಾರಣೆಗಾಗಿ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಅಥವಾ ಉಳಿದ ಶೈಕ್ಷಣಿಕ ಪ್ರಾಧಿಕಾರಿಗಳಿಂದ ಸಲಹೆಗಳಿಗಾಗಿ ಕಾಯದೇ ತಾವೇ ಕಾರ್ಯ ನಿರ್ವಹಿಸುವ ನಿರೀಕ್ಷೆ ಇದೆ.ಭಾರತದಲ್ಲಿ ಈ ಬದಲಾವಣೆಗಳನ್ನು ಶೈಕ್ಷಣಿಕ ಯೋಜನೆ ಮತ್ತು ಆಡಳಿತ ರಾಷ್ಟ್ರೀಯ ವಿಶ್ವವಿದ್ಯಾಲಯ (NUEPA) ದ ಶಾಲಾ ನಾಯಕತ್ವದ ರಾಷ್ಟ್ರೀಯ ಕಾಲೇಜು (NCSL) ಘಟಕವು ಬೆಂಬಲಿಸುತ್ತದೆ.

ಟೆಸ್ ಇಂಡಿಯಾವು ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs) ಗಳನ್ನು ಶಾಲಾ ನಾಯಕರಿಗೆ ಒದಗಿಸುವ ಬ್ಯಾಂಕನಂತಿದ್ದು 20 ಕಲಿಕಾ ಘಟಕಗಳನ್ನು ಒಳಗೊಂಡಿರುತ್ತದೆ. ಶಾಲಾ ನಾಯಕತ್ವದ ವಿವಿಧ ರೀತಿಯ ಕಲಿಕಾ ಚಟುವಟಿಕೆಗಳನ್ನು ಸಂರಚಿಸಲು ಇವುಗಳನ್ನು ಆಯೋಜಿಸಲಾಗಿದೆ. ಕೆಲವು

ಬೋಧನೆ ಮತ್ತು ಕಲಿಕೆ ಸುಧಾರಿಸುವುದನ್ನು ಸ್ಪಷ್ಟವಾಗಿ ಕೇಂದ್ರೀಕರಿಸುತ್ತಾ, ಶಿಕ್ಷಕರ ತರಗತಿ ಕೋಣೆಯ ರೂಢಿಯನ್ನು ಬೆಳೆಸಿದರೆ ಮತ್ತೆ ಕೆಲವು ಶಾಲೆಗಳಲ್ಲಿಯ ಪದ್ಧತಿ ಮತ್ತು ಪ್ರಕ್ರಿಯೆಯನ್ನು ಕೇಂದ್ರೀಕರಿಸುತ್ತವೆ. ಕಾಣ್ಕೆಯನ್ನು ಹೊಂದುವುದು,ಶಾಲೆಯ ಪ್ರಗತಿ ಪರಿಶೀಲನೆ ಸಂಘಟಿಸುವುದು, ಅಭಿವೃದ್ಧಿ ಯೋಜನೆಯನ್ನು ಮಾಡುವುದು,ಸ್ಥಳೀಯ ಸಮುದಾಯದೊಂದಿಗೆ ಕಾರ್ಯ ನಿರ್ವಹಿಸುವುದನ್ನು ಒತ್ತಿ ಹೇಳುತ್ತದೆ.ನಿಮ್ಮ ಸ್ವಂತದ ಔದ್ಯೋಗಿಕ ಕಲಿಕಾ ಅಗತ್ಯತೆಗಳಿಗೆ ಬೇಕಾದ OERs ಗಳನ್ನು ನೀವು ಆಯ್ಕೆಮಾಡಿಕೊಳ್ಳಬಹುದು.ಈ ಘಟಕಗಳು ಶಾಲಾ ನಾಯಕತ್ವಕ್ಕಾಗಿ NCSL ನಿಂದ ಆದ್ಯತೀಕರಿಸಿ ಗುರುತಿಸಲಾಗಿದೆ ಆದರೆ ಅವು ಯಾವುದೇ ಕೋರ್ಸ್ ಅಲ್ಲ.ಈ ಘಟಕಗಳಿಂದ ನಿಮ್ಮ ಮಾರ್ಗಗಳನ್ನು ನೀವೇ ರೂಪಿಸಲು ಉತ್ತೇಜಿಸಲಾಗುತ್ತದೆ.

ಪ್ರತಿಯೊಂದು ಘಟಕವು ಚಟುವಟಿಕೆ ಮತ್ತು ವ್ಯಕ್ತಿ ಅಧ್ಯಯನವನ್ನು ಒಳಗೊಂಡಿವೆ.ಈ ಚಟುವಟಿಕೆಗಳು ನಿಮ್ಮ ಶಾಲೆಗಳಲ್ಲಿ ನಡೆಸಲು ನಿಮಗಾಗಿಯೇ ಇವೆ;ಕೆಲವೊಂದು ನಿಮ್ಮ ಸಹೋದ್ಯೋಗಿಗಳೊಂದಿಗೆ ಮತ್ತು ಕೆಲವೊಂದು ನೀವೆ ಸ್ವತಃ ಮಾಡಬೇಕಾಗುತ್ತದೆಯೇ ವಿನಾ ಹೆಚ್ಚಿನ ಕಾರ್ಯವೆಂದು ಪರಿಗಣಿಸಬಾರದು. ಅವು ನಿಮಗೆ ಯಾವುದೇ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಮತ್ತು ಕಾರ್ಯದ ಯೋಚನೆ ಮಾಡಲು, ಪ್ರತಿಕ್ರಿಯಿಸಲು ಮತ್ತು ವಸ್ತು ವಿಷಯಗಳ ಉತ್ತಮ ಅರಿವನ್ನು ಮೂಡಿಸಲು ಸಹಕಾರಿಯಾಗಿವೆ.ಪ್ರತಿ ಘಟಕವನ್ನು ಸಂಯೋಜಿತವಾಗಿ ಯೋಜಿಸಲಾಗಿದೆ ಆದರೆ ನೀವು ವಯಕ್ತಿಕ ಚಟುವಟಿಕೆಗಳನ್ನು ಆಯ್ಕೆ ಮಾಡಿಕೊಳ್ಳಬೇಕೇ ವಿನಾ ಪೂರ್ತಿ ಘಟಕವನ್ನಲ್ಲ. ಈ OERs ಗಳು ನಮ್ಮ ಜ್ಞಾನ ಮತ್ತು ಅನುಭವವನ್ನು ಗೌರವಿಸುತ್ತವೆ ಮತ್ತು ಒಟ್ಟಾಗಿ ಕಾರ್ಯ ನಿರ್ವಹಿಸಲು ಪ್ರೋತ್ಸಾಹಿಸುತ್ತದೆ.

ಈ ಪರಿಚಯಾತ್ಮಕ ಘಟಕದಲ್ಲಿ ನಿಮ್ಮ ಔದ್ಯೋಗಿಕ ಬೆಳವಣಿಗೆಗೆ ನೀವು ಚಿಂತನೆಯನ್ನು ಮಾಡಲು ಪ್ರಾರಂಭಿಸುವಿರಿ.ಈಗಾಗಲೇ ನೀವು ಯಾವ ಜ್ಞಾನ ಮತ್ತು ಕೌಶಲವನ್ನು ಹೊಂದಿದ್ದೀರಿ ಮತ್ತು ಶಾಲಾ ನಾಯಕರಾಗಿ ನೀವು ಹೇಗೆ ಬೆಳವಣಿಗೆ ಹೊಂದಿದ್ದೀರಿ ಎಂಬುದನ್ನು ಪರಿಗಣಿಸಲಾಗುತ್ತದೆ.

ಟೆಸ್ ಇಂಡಿಯಾವು ಶಿಕ್ಷಕರಿಗೆ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs) ಗಳನ್ನು ಒದಗಿಸುತ್ತದೆ. ಎಲ್ಲಾ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs) ಗಳು ಕಲಿಕೆಯ ಸಾಮಾಜಿಕ ನೋಟಗಳನ್ನು ಒಳಗೊಂಡಿದ್ದು, ಕಲಿಕೆ ನಿಮ್ಮ ಸಹೋದ್ಯೋಗಿಗಳೊಂದಿಗೆ ಮತ್ತು ನಿಮ್ಮ ಶಾಲೆಗಳಲ್ಲಿ ವಿದ್ಯಾರ್ಥಿಗಳೊಂದಿಗೆ ಭಾಗವಹಿಸುವಿಕೆಯ ಮೂಲಕ ನಡೆಯುತ್ತದೆ.ಅವು ಉತ್ತಮ ರೂಢಿಯನ್ನು ಮಾಡಲು ವಿವರವಾದ ರಿಸಿಪಿಗಳಲ್ಲ ಅಥವಾ ಬೋದನಾ ಸಾಮಗ್ರಿಗಳಲ್ಲ. ಬದಲಾಗಿ ಅವು ನೀವು ಮತ್ತು ನಿಮ್ಮ ಶಿಕ್ಷಕರಲ್ಲಿ ಪ್ರತಿಕ್ರಿಯಾತ್ಮಕ ಮತ್ತು ನಿಷ್ಪಕ್ಷಪಾತ ಪರಿಚಯ ಮತ್ತು ಪಾತ್ರವನ್ನು ಬೆಳೆಸಿಕೊಳ್ಳಲು ಉತ್ತೇಜಿಸುತ್ತದೆ.ಇದರ ಉದ್ದೇಶವೇನೆಂದರೆ ಕಲಿಕೆ & ಅನ್ವೇಷಣೆಯ ಬಗ್ಗೆ ಮುಕ್ತವಾಗುವುದು ಮತ್ತು ತಮ್ಮ ಪರಿಸರದಲ್ಲಿನ ಸಮಸ್ಯೆಗಳನ್ನು ತಾವೇ ಬಗೆಹರಿಸಿಕೊಳ್ಳುವುದು.ಅದು ನಿಮ್ಮ ಶಾಲೆ ಅಥವಾ ನಿಮ್ಮ ತರಗತಿ ಕೋಣೆಯಾಗಬಹುದು. (Lave and Wenger, 1991; Bruner, 1996; Wenger,1998).



**ಚಿಂತನಾ/ವೈಚಾರಿಕ ನಿಲುಗಡೆ**

- ನಿಮ್ಮ ವೃತ್ತಿಯನ್ನು ಶಾಲಾ ನಾಯಕರಾಗಿ ಅಥವಾ ಹಿರಿಯ ಶಿಕ್ಷಕರಾಗಿ ಪ್ರಾರಂಭಿಸಿದ ಬಗ್ಗೆ ಯೋಚಿಸಿ
- ಶಾಲಾ ನಾಯಕರಾದಾಗಿನಿಂದ ನೀವು ಏನನ್ನು ಕಲಿತಿರಿ.
- ನೀವು ಹೇಗೆ ಕಲಿತಿರಿ?
- ಔದ್ಯೋಗಿಕ/ವೃತ್ತೀಯ ಕಲಿಕೆಗೆ ನೀವು ಯಾವ ಅವಕಾಶಗಳನ್ನು ಹೊಂದಿದ್ದೀರಿ?

# 2 ಶಾಲಾ ನಾಯಕರಾಗಿ ನಿಮ್ಮ ಸ್ವಂತ ಕಲಿಕೆಯನ್ನು ಯೋಚಿಸುವುದು

ಎಲ್ಲಾ ಹೊಸ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಲು ಶಾಲಾ ನಾಯಕರು ಹೆಚ್ಚಿನ ಕೌಶಲ್ಯಗಳನ್ನು ಬೆಳೆಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ.ನೀವು ಪ್ರಾಯಶಃ ಶಾಲಾ ನಾಯಕರಾಗಿದ್ದೀರಾ ಏಕೆಂದರೆ ನೀವು ಉತ್ತಮ ಶಿಕ್ಷಕರು ಮತ್ತು ಒಳ್ಳೆಯ ಅರ್ಹತೆಯುಳ್ಳವರಾಗಿದ್ದೀರಾ. ನಾಯಕರಾಗುವುದು ಶಿಕ್ಷಕರ ಪಾತ್ರಕ್ಕಿಂತ ತುಂಬಾ ಭಿನ್ನವಾಗಿದೆ.ನಿಮ್ಮ ಪಾತ್ರವು ದೈನಂದಿನ ಶಾಲಾ ಕಾರ್ಯವನ್ನು ನಿರ್ವಹಣೆ ಮಾಡುವುದು ಮತ್ತು ತನ್ನ ಸಮುದಾಯದಲ್ಲಿ ಶಾಲೆಯು ವಿದ್ಯಾರ್ಥಿಗಳಿಗೆ ಸಾದ್ಯವಿರುವ ಉತ್ತಮ ಶಿಕ್ಷಣವನ್ನು ನೀಡುವಂತೆ ಖಾತ್ರಿ ಪಡಿಸಿಕೊಳ್ಳುವುದು ಆಗಿದೆ.ಈ ಘಟಕದಲ್ಲಿ ಒಬ್ಬ ಪರಿಣಾಮಕಾರಿ ಶಾಲಾ ನಾಯಕನಿಗೆ ಅವಶ್ಯವಿರುವ ಕೆಲವೊಂದು ಕೌಶಲ ಮತ್ತು ಸಾಮರ್ಥ್ಯಗಳನ್ನು ಪ್ರಸ್ತಾಪಿಸಲಾಗಿದ್ದು, ಶಾಲೆಯಲ್ಲಿ ಪ್ರಭಾವಯುತವಾಗಿ ಕಾರ್ಯ ನಿರ್ವಹಿಸಲು ಶಿಕ್ಷಕರಿಗೆ ಸಹಕಾರಿಯಾಗಿದೆ.

# ಚಿಂತನಾ/ವೈಚಾರಿಕ ನಿಲುಗಡೆ

**ನೀವು ಶಾಲೆಯಲ್ಲಿ ಇದ್ದಾಗ ಅಥವಾ ಬೋಧನಾ ವೃತ್ತಿಯನ್ನು ಪ್ರಾರಂಭಿಸಿದಾಗಿನ ದಿನಗಳನ್ನು ನೆನಪಿಸಿ.ಮುಂದಿನ ಹತ್ತು ವರ್ಷಗಳ ಅವಧಿಯನ್ನು ಯೋಚಿಸಿ. ಹತ್ತು ವರ್ಷಗಳ ಅವಧಿಯಲ್ಲಿ ಶಾಲೆ ಮತ್ತು ನೀವು ವೃತ್ತಿಯನ್ನು ಪ್ರಾರಂಭಿಸಿದಾಗಿನ ವರ್ಷದ ಶಾಲೆಗಳಲ್ಲಿ ಪ್ರಮುಖ ವ್ಯತ್ಯಾಸವೇನು?**

## ಚಟುವಟಿಕೆ 1: ನಾಯಕರಾಗಿ ನಿಮ್ಮ ಔದ್ಯೋಗಿಕ ಬೆಳವಣಿಗೆ



**ಚಿತ್ರ:1. ನಾಯಕರಾಗಿ ನಿಮ್ಮ ಔದ್ಯೋಗಿಕ ಬೆಳವಣಿಗೆಯನ್ನು ಪರಿಗಣಿಸುವುದು.** .

1. ನೀವು ನಿಮ್ಮನ್ನು ನಾಯಕರನ್ನಾಗಿ ಗುರುತಿಸುವಂತಹ ಐದು ಶಬ್ದಗಳನ್ನು ನಿಮ್ಮ ಕಲಿಕಾ ದಿನಚರಿಯನ್ನು ಬಳಸಿ ಬರೆಯಿರಿ.
2. ನಿಮ್ಮ ಶಿಕ್ಷಕರ ದೃಷ್ಟಿಯಲ್ಲಿ ನೀವು ಹೇಗೆ ಅವರ ನಾಯಕರಾಗಿದ್ದೀರಿ ಎಂದು ಭಾವಿಸುತ್ತೀರಿ?ಅವರು ನಿಮ್ಮನ್ನು ಇಷ್ಟ ಪಡುತ್ತಾರಾ?ಅವರು ನಿಮ್ಮ ಸ್ಥಾನವನ್ನು ಗೌರವಿಸದೇ ಜ್ಞಾನ ಮತ್ತು ಕೌಶಲ್ಯವನ್ನು ಗೌರವಿಸುತ್ತಾರಾ? ಇದೊಂದು ಘಟನೆ( ಕೇಸ್) ಎಂದು ನೀವು ಏಕೆ ಯೋಚಿಸುತ್ತೀರಿ? ನಿಮ್ಮ ಶಿಕ್ಷಕರಿಗೆ ನೀವು ಔದ್ಯೋಗಿಕ ಬೆಳವಣಿಗೆಯನ್ನು ಹೇಗೆ ಪ್ರಾತ್ಯಕ್ಷಿಕೆಯನ್ನು ನೀಡುತ್ತೀರಿ? ಉದಾಹರಣೆಗೆ,ಹೊಸ ವಿಚಾರಗಳಿಗೆ ಅವರು ನಿಮ್ಮನ್ನು ನೋಡಲು ಇಚ್ಚೆಪಡುವರಾ ಮತ್ತು ತಮ್ಮ ಕಾರ್ಯದಲ್ಲಿ ಅದರ ಪ್ರಭಾವವನ್ನು ನೋಡಬಹುದೇ?
3. ಪ್ರಶ್ನೆ 1 ಮತ್ತು 2ರ ನಿಮ್ಮ ಪ್ರತಿಕ್ರಿಯೆಯನ್ನು ನೋಡಿ, ನಾಯಕರಾಗಿ ನಿಮ್ಮ ಸ್ವಂತದ ಔದ್ಯೋಗಿಕ ಬೆಳವಣಿಗೆಯಲ್ಲಿ ಅಡೆತಡೆಗಳು ಏನು ಎಂದು ನೀವು ಮನಗಾಣುವಿರಿ?

ಚರ್ಚೆ:

ನಿಮ್ಮ ಪ್ರತಿಕ್ರಿಯಯು ನಿಮ್ಮ ವಯಕ್ತಿಕ ಮತ್ತು ನಿಮ್ಮ ಸಂದರ್ಭಕ್ಕೆ ಅನುಗುಣವಾಗಿರಲಿ. ನೀವು ಎದುರಿಸುತ್ತಿರುವ ಸವಾಲುಗಳಿಗೆ ಮೂರು ವಿವಿಧ ರೀತಿಯ ನಾಯಕರು ನಿಮಗೆ ಪ್ರತಿಕ್ರಿಯಿಸಲು ಸಹಾಯವಾಗಲಿ.

ಮೊದಲ ಪ್ರಕಾರದವರೆಂದರೆ, ತುಂಬಾ ವರ್ಷಗಳ ಕಾಲ ಶಾಲೆಯನ್ನು ಮುನ್ನಡೆಸಿದ ಅನುಭವವುಳ್ಳವರು, ತಾವು ಮಾಡುವ ಕಾರ್ಯದಲ್ಲಿ ಆತ್ಮವಿಶ್ವಾಸವುಳ್ಳವರು, ಆದರೆ ತಮ್ಮ ಸಹೋದ್ಯೋಗಿಗಳು ಇನ್ನು ಕಲಿಯುತ್ತಿರುವವರು ಮತ್ತು ತಮ್ಮ ಸ್ವಂತದ ರೂಢಿಯನ್ನು ಬದಲಿಸುತಿರುವವರು ಎಂಬುದನ್ನು ಕಂಡುಹಿಡಿಯಲು ಕಷ್ಟಪಡುತ್ತಾರೆ. ಯಾಕೆ ಹೀಗೆ ಎಂದರೆ ಅವರು ಆತ್ಮವಿಶ್ವಾಸವುಳ್ಳವರು ಮತ್ತು ಕಾರ್ಯತತ್ಪರು ಎಂದು ಕಾಣಿಸಿಕೊಳ್ಳಲು ಬಯಸುತ್ತಾರೆ. ಆದರೆ ಔದ್ಯೋಗಿಕ ಬೆಳವಣಿಗೆಯನ್ನು ತುಂಬಾ ಖಾಸಗಿ(ಸ್ವಂತದ್ದು) ಮತ್ತು ಹುದುಗಿದ್ದು ಎಂದು ಭಾವಿಸುತ್ತಾರೆ.

ಎರಡನೇ ಪ್ರಕಾರದ ನಾಯಕರೆಂದರೆ ಅವರು ಕಿರಿಯರಾಗಿದ್ದು, ವಯಕ್ತಿಕ ಬೆಳವಣಿಗೆಗೆ ಕ್ಷೇತ್ರಗಳಿವೆ ಎಂದುಕೊಂಡಲ್ಲಿ ತಾವು ಅಧಿಕಾರ ಕಳೆದುಕೊಳ್ಳಬಹುದು ಎಂಬ ಕಾಳಜಿ ಇರುವವರು. ಹೆಚ್ಚಿನ ಹಿರಿಯ ಶಿಕ್ಷಕರಿಗಿಂತ ತಾವು ತರಗತಿ ಕೋಣೆಯಲ್ಲಿ ಕಡಿಮೆ ಪರಿಣತರೆಂದು ಅವರಿಗೆ ಅರಿವಿದೆ.ಆದರ ನಾಯಕತ್ವದ ಮಾದರಿಯಲ್ಲಿ ಹೆಚ್ಚಿನದನ್ನು ನೀಡುವ ಉತ್ಸಾಹದಿಂದ ಕೂಡಿದ ಕಾಣ್ಕೆ ಮತ್ತು ಇತ್ತೀಚಿನ ವಿಚಾರಗಳನ್ನು ಅರಿಯುವ ಮತ್ತು ಉಳಿದ ಶಿಕ್ಷಕರ ಪರಿಣತಿಯನ್ನು ಗೌರವಿಸುವ ಸ್ವಭಾವದವರಾಗಿರುತ್ತಾರೆ.

ಅಂತಿಮವಾಗಿ, ಈ ಗುಂಪಿನ ನಾಯಕರು – ತಮ್ಮ ಆಚರಣೆಗಳನ್ನು ಆಸೆ ಪಟ್ಟು ಬೆಳೆಸಿಕೊಂಡವರು ಮತ್ತು ಕಾರ್ಯೋನ್ಮುಖರಾಗುವವರು, ಉಳಿದವರಿಗೆ ಪಾರದರ್ಶಕವಾಗಿ ಇರುವವರು. ಈ ಚಟುವಟಿಕೆಗಳಿಗೆ ರ್ಷಗಳ ಕಾಲ ಶಾಲೆಯನ್ನು ಮುನ್ನಡೆಸಿದ ಅನುಭವವುಳ್ಳವರು, ತಾವು ಮಾಡುವ ಕಾರ್ಯದಲ್ಲಿ ಆತ್ಮವಿಶ್ವಾಸವುಳ್ಳವರು, ಆದರೆ ತಮ್ಮ ಸಹೋದ್ಯೋಗಿಗಳು ಇನ್ನು ಕಲಿಯುತ್ತಿರುವವರು ಮತ್ತು ತಮ್ಮ ಸ್ವಂತದ ರೂಢಿಯನ್ನು ಬದಲಿಸುತಿರುವವರು ಎಂಬುದನ್ನು ಕಂಡುಹಿಡಿಯಲು ಕಷ್ಟಪಡುತ್ತಾರೆ. ಯಾಕೆ ಹೀಗೆ ಎಂದರೆ ಅವರು ಆತ್ಮವಿಶ್ವಾಸವುಳ್ಳವರು ಮತ್ತು ಕಾರ್ಯತತ್ಪರು ಎಂದು ಕಾಣಿಸಿಕೊಳ್ಳಲು ಬಯಸುತ್ತಾರೆ. ಆದರೆ ಔದ್ಯೋಗಿಕ ಬೆಳವಣಿಗೆಯನ್ನು ತುಂಬಾ ಖಾಸಗಿ(ಸ್ವಂತದ್ದು) ಮತ್ತು ಹುದುಗಿದ್ದು ಎಂದು ಭಾವಿಸುತ್ತಾರೆ.

ಉತ್ತಮ ನಾಯಕರ ಗುಣಲಕ್ಷಣಗಳನ್ನು ಸರಿಯಾಗಿ ದಾಖಲಿಸಲಾಗಿದೆ.ಕೋಷ್ಟಕ 1 ರಲ್ಲಿ ಭಾರತೀಯ ಸಂದರ್ಭಕ್ಕೆ ಹೇಗೆ ಇವು ಅನ್ವಯವಾಗುತ್ತದೆ ಎಂದು ಕೆಲವು ಸೂಚನೆಗಳಿವೆ. ಚಟುವಟಿಕೆ 3 ರಲ್ಲಿ ಈ ವಿಶ್ಲೇಷಣೆಗೆ ನೀವು ಮತ್ತೆ ಬರುತ್ತೀರಿ.

**ಕೋಷ್ಟಕ 1: ಉತ್ತಮ ನಾಯಕನ ಗುಣಲಕ್ಷಣಗಳು. (ಗಾರ್ಡನರ , *1997).***

| ಉತ್ತಮ ನಾಯಕನ ಗುಣಲಕ್ಷಣಗಳು | ನಿಮ್ಮ ಸಂದರ್ಭದಲ್ಲಿ ಇವು ಏನನ್ನು ಅರ್ಥೈಸುತ್ತದೆ. |
|---|---|
| ಸಕ್ಷಮ ಅಧಿಕಾರಗಳಿಗೆ (ಎದುರಿಸಲು) ಸನ್ನದ್ಧರಾಗುವುದು. | ನೀವು ನಿಮ್ಮ ಜಿಲ್ಲಾ ಶಿಕ್ಷಣ ಕಛೇರಿ ಮತ್ತು ಇತರೇ ಸಂಬಂಧಿತ ವ್ಯವಸ್ಥೆಯಾದ ಸಮೂಹ ಸಂಪನ್ಮೂಲ ಕೇಂದ್ರ (CRCs), ಕ್ಷೇತ್ರ ಸಂಪನ್ಮೂಲ ಕೇಂದ್ರ (BRCs), ಸ್ಥಳೀಯ ಪಂಚಾಯತ್,ಶಾಲಾ ಮೇಲುಸ್ತುವಾರಿ ಸಮೀತಿಗಳೊಂದಿಗೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಇವು ಮೌಲ್ಯಯುತವಾದ ಸಂಪನ್ಮೂಲಗಳನ್ನು ಒದಗಿಸುತ್ತದೆ ಮತ್ತು ದೇಶದ ವಿವಿಧ ಭಾಗಗಳಲ್ಲಿ ಇವತ್ತಿಗೂ ಶಿಕ್ಷಕರ ನೇಮಕಾತಿಯ ಜವಾಬ್ದಾರಿ ಮತ್ತು ಶಿಸ್ತು ಕಾರ್ಯವನ್ನು ಮಾಡುತ್ತವೆ. ಈ ಎಲ್ಲಾ ಸಂಸ್ಥೆಗಳು ಮತ್ತು ಕಾರ್ಯಕಾರಿಣಿಯೊಂದಿಗೆ ಜಾಗರೂಕತೆಯಿಂದ ಮತ್ತು ಸೂಕ್ಷ್ಮತೆಯಿಂದ ನಿಮ್ಮ ಸಂಬಂಧವನ್ನು ನೀವು ನಿರ್ವಹಿಸಬೇಕಾದುದು ಬಹಳ ಮಹತ್ವವಾಗಿದೆ.ಎದುರುಹಾಕಿಕೊಳ್ಳುವುದು ಉತ್ತಮ ಮಾರ್ಗವಲ್ಲ.ಆದರೆ ಒಳ್ಳೆಯ ಕಾರ್ಯವನ್ನು ಪ್ರಾರಂಭಿಸಲು ಹೆದರಬೇಡಿ.ನಿಮ್ಮ ಶಾಲೆಗೆ ಸಹಾಯವಾಗುತ್ತದೆ ಎಂದಾದರೆ ಈ ಹಿಂದೆ ಇತರರು ಮಾಡಿದ ರೀತಿಗಿಂತ ಭಿನ್ನವಾಗಿ ಕಾರ್ಯವನ್ನು ಮಾಡಿ. |
| ಗಂಡಾಂತರ(ರಿಸ್ಕ)ಗಳನ್ನು ತೆಗೆದುಕೊಳ್ಳಲು ಸಿದ್ದರಾಗುವುದು. | ಪ್ರಾಯೋಗಿಕವಾಗಿ ಇದು ಕಷ್ಟಸಾಧ್ಯವಾದುದು. ಭಾರತದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಜನರು ಯಾವುದೇ ಕಾರ್ಯವನ್ನು ಪ್ರಾರಂಭಿಸಲು ಹಿರಿಯರಿಂದ ಒಪ್ಪಿಗೆಯನ್ನು ನಿರೀಕ್ಷಿಸುತ್ತಾರೆ. ನಿಮ್ಮ ಜಿಲ್ಲಾ ಆದ್ಯತೆ ಮತ್ತು ಶಾಲಾ ಅಭಿವೃದ್ಧಿ ಯೋಜನೆ (SDP) ಯ ಬಗ್ಗೆ ಕಾಳಜಿ ಇದ್ದಲ್ಲಿ ಮತ್ತು ಯಾವ ಕಾರಣಕ್ಕಾಗಿ ನಿರ್ದಿಷ್ಟ ಬದಲಾವಣೆಯನ್ನು ಮಾಡಿತ್ತಿದ್ದೀರಿ ಎಂಬ ಬಗ್ಗೆ ವೈಚಾರಿಕ ಹಿನ್ನೆಲೆ ಇದ್ದಲ್ಲಿ, ನೀವು ಬಯಸಿದ ಸುಧಾರಣೆಗಳನ್ನು ಸಾಧಿಸಲು ನೀವು ನಿಮ್ಮ ಶಾಲೆಗಳಲ್ಲಿ ರಿಸ್ಕಗಳನ್ನು ತೆಗೆದುಕೊಳ್ಳಲು ಸಿದ್ದರಾಗುವುದು. |
| ಸೋಲಿನಿಂದ ಸಹಜತೆಗೆ ಬರುವುದು. | ಹೆಚ್ಚಿನ ಸಂದರ್ಭಗಳಲ್ಲಿ( ಬಹಳ ಸಂಸ್ಕೃತಿಗಳಲ್ಲಿ) ನೀವು ತಪ್ಪುಗಳನ್ನು ಮಾಡಿದಲ್ಲಿ ಅಥವಾ ಪರಿಪೂರ್ಣತೆಗಿಂತ ಕಡಿಮೆ ಸಾಧನೆ ಇದ್ದಲ್ಲಿ ಒಪ್ಪಿಕೊಳ್ಳಲು ಕಷ್ಟಸಾಧ್ಯ.ಬದಲಾವಣೆಯನ್ನು ತರುವುದು ಬೇಡಿಕೆ ಮತ್ತು ಎಂದೂ ನಿರೀಕ್ಷಿಸಿದಷ್ಟು ನಯವಾಗಿ ಹೋಗಲಾರದು.ಎಲ್ಲಾ ಸಮಯದಲ್ಲಿ ನಾವು ಯೋಜಿಸಿದಂತೆ ನಡೆಯಲಾಗದು.ನೀವು ಇದೊಂದು ಕಲಿಕಾ ಅವಕಾಶವೆಂದು ಗೌರವಿಸಬೇಕಾಗುತ್ತದೆ.ಏಕೆ ಯೋಜಿಸಿದಂತೆ ಕಾರ್ಯವು ನಡೆಯುವುದಿಲ್ಲ ಎಂಬ ಬಗ್ಗೆ ಕಾರಣವನ್ನು ಕಂಡುಹಿಡಿಯಿರಿ ಮತು ಆ ಕುರಿತು ಪರ್ಯಾಲೋಚಿಸುವುದು.ಆದರೆ ನೀವು ವಿಭಿನ್ನವಾಗಿ ಕಾರ್ಯವನ್ನು ಮಾಡಿದ್ದರಿಂದ ಹೆದರಬೇಕಾಗಿಲ್ಲ. |
| ಸ್ವಭಾವ ಮತ್ತು ಒಳನೋಟದ ಬಗ್ಗೆ ನಂಬಿಕೆ. | ನಿಮಗೆ ಪ್ರಾಯಶಃ ವಿವಿಧ ಶಾಲೆಗಳಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದ ಅನುಭವ ಇದೆ. ಈ ಅನುಭವದ ಆಧಾರದ ಮೇಲೆ ಶಾಲಾ ನಾಯಕರಾಗಿ ನಿಮ್ಮ ಪಾತ್ರವನ್ನು ನಿರ್ವಹಿಸಲು ಮತ್ತು ಬಳಸಲು ಸಮರ್ಥರಾಗುತ್ತೀರಿ. ಸ್ವಾಯತ್ತ ಶಾಲೆಗಳು ಇದರ ಹೊಸ ಆಶಯವೇನೆಂದರೆ ಸ್ವಾತಂತ್ರ್ಯದೊಂದಿಗೆ ಸೃಜನಾತ್ಮಕವಾಗಿ ಮತ್ತು ಹೊಸತನದೊಂದಿಗೆ ಪ್ರಯತ್ನಿಸುವುದು. |
| ದೊಡ್ಡ ಚಿತ್ರವನ್ನು ಮನಸ್ಸಿನಲ್ಲಿ ಹೊಂದುವ ಸಾಮರ್ಥ್ಯ. | ಇದು ಎಲ್ಲಾ ನಾಯಕರಿಗೆ ಅನ್ವಯಿಸುತ್ತದೆ. ನಿಮ್ಮ ಶಾಲೆಯ ಬಗ್ಗೆ ಸ್ಪಷ್ಟ ಕಾಣ್ಕೆಯನ್ನು ಸ್ಥಾಪಿಸುವ ಮತ್ತು ಸಂವಹನ ಮಾಡುವದು ನಿಮ್ಮ ಪಾತ್ರವಾಗಿದೆ.ಈ ಕಾಣ್ಕೆಗೆ ಎಲ್ಲಾ ಕ್ರಿಯೆಗಳು ಮತ್ತು ಪ್ರಯತ್ನಗಳನ್ನು ಜೋಡಿಸಬೇಕು. ಶಾಲಾ ನಾಯಕತ್ವದ ಬಗ್ಗೆ OER ಇದ್ದು ನಿಮ್ಮ ಶಾಲೆಯ ಬಗ್ಗೆ ಕಾಣ್ಕೆಯನ್ನು ಕಾಣಲು ಇತರರೊಂದಿಗೆ ಹೇಗೆ ಕಾರ್ಯ ನಿರ್ವಹಿಸಬೇಕು ಎಂಬ ಬಗ್ಗೆ ಪ್ರಾಯೋಗಿಕಸೂಚನೆಯನ್ನು ನೀಡಲಾಗಿದೆ.ಇದು ನಿಮಗೆ SMC ಸದಸ್ಯರ ಜೊತೆ ಸೇರಿ SDP ಯನ್ನು ಮಾಡಲು ಸಹಕಾರಿಯಾಗಿದೆ. |
| ನೈತಿಕ ಬದ್ಧತೆ | NCF 2005, NCFTE 2009 ಮತ್ತು RtE 2009 ಈ ದಾಖಲೆಗಳಲ್ಲಿ ಸೂಚಿಸಿದ ಮೌಲ್ಯಗಳು ಮತ್ತು ನಂಬಿಕೆಗಳು, ಪಾರಂಪರಿಕವಾಗಿದ್ದ ಕೆಲವು ನಂಬಿಕೆಗಳಿಗೆ ಸವಾಲೆಸೆಯುತ್ತವೆ. ಸರ್ಕಾರವು ಈ ದಾಖಲೆಗಳಲ್ಲಿ ಸೂಚಿಸಿದ ಆಶಯಗಳನ್ನು ಪೂರೈಸಲು, ನೀವು ಈ ನೀತಿ ನಿಯಮಗಳ ತಳಹದಿಯನ್ನು ಅರ್ಥೈಸುವುದು ಮತ್ತು ನಿಮ್ಮ ಶಾಲೆಗಳಲ್ಲಿ ಮತ್ತು ಶಾಲಾ ಸುತ್ತಲಿನ ಸ್ಥಳೀಯ ಸಮುದಾಯದೊಂದಿಗೆ ಮಾದರಿಯಾಗಿಸುವುದು ಅವಶ್ಯಕವಾಗಿದೆ. |
| ಸಮಯಪ್ರಜ್ಞೆ ಮತ್ತು ಅವಲೋಕನ ಸಾಮರ್ಥ್ಯ ಹಾಗೂ ಅನುಭವದೊಂದಿಗೆ ಕಲಿಯುವುದು | ನಿಮ್ಮ ಶಾಲೆಯನ್ನು ಮೌಲ್ಯೀಕರಿಸಲು ಪ್ರಾರಂಭಿಸಿದಾಗ, ನಿಮ್ಮ ಶಾಲೆಯಲ್ಲಿ ನೀವು ಮಾಡಿದ ಬಹಳಷ್ಟು ಬದಲಾವಣೆಗಳನ್ನು ನೀವು ಗುರುತಿಸುವಿರಿ. ಪ್ರಯತ್ನಿಸದಿರುವುದು ಮತ್ತು ತುಂಬಾ ಬದಲಾವಣೆಯನ್ನು ಅತೀ ಶೀಘ್ರವಾಗಿ ನಿರೀಕ್ಷಿಸುವುದು ಇವು ಮಹತ್ವದ್ದಾಗಿದೆ.ನೀವು ಆದ್ಯತೀಕರಣ ಮಾಡುವುದು ಮತ್ತು ನಿಧಾನವಾಗಿ ಹೆಜ್ಜೆ ಇಡುವುದು ಮತ್ತು ಎಲ್ಲಾ ಶಿಕ್ಷಕರನ್ನು ನಿಮ್ಮೊಂದಿಗೆ ಒಯ್ಯುವುದು ತುಂಬಾ ಅವಶ್ಯಕವಾಗಿದೆ. |

## ವ್ಯಕ್ತಿ ಅಧ್ಯಯನ 1: ಶ್ರೀ.ನಾಗರಾಜರವರು ಪಾಠ ಯೋಜನೆಯನ್ನು ಸುಧಾರಿಸಿಕೊಳ್ಳಲು ಬೆಂಬಲವನ್ನು ನೀಡುತ್ತಾರೆ.

**ಮುಖ್ಯ ಶಿಕ್ಷಕ ಶ್ರೀ.ನಾಗರಾಜುರವರು ಗ್ರಾಮೀಣ ಪ್ರೌಢಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.**

ಈ ಶಾಲೆಯಲ್ಲಿ ನಾನು ಕಾರ್ಯವನ್ನು ಪ್ರಾರಂಭಿಸಿದಾಗ,ಶಿಕ್ಷಕರಿಗೆ ನೀವು ಯಾವ ಸವಾಲುಗಳನ್ನು ಎದುರಿಸುತ್ತಿದ್ದೀರಿ ಎಂದು ನಾನು ಕೇಳಿದೆನು. ಅವರು ನನಗೆ ಏನು ಹೇಳಿದರೆಂದರೆ ಪಠ್ಯವಸ್ತುವನ್ನು ಮುಗಿಸುವುದೇ ನಿಜವಾಗಿ ಕಷ್ಟದ ಕೆಲಸ. ಏಕೆಂದರೆ ಕಲಿಯಲು ಅದರಲ್ಲಿ ತುಂಬಾ ಇದೆ.ಅಲ್ಲದೇ ಪ್ರತೀ ವರ್ಷವೂ ನಿರ್ವಹಿಸಬೇಕಾದುದು, ಆದರೆ ಬಹಳಷ್ಟು ಅಂಶಗಳು ಸತ್ಯವಾಗಿದೆ. ಪರೀಕ್ಷಾ ಫಲಿತಾಂಶವನ್ನು ನೋಡಿದಾಗ, ನಾನು ಆಶ್ಚರ್ಯಚಕಿತನಾದೆನು.ಅದು ಎಷ್ಟು ಕಡಿಮೆಯಾಗಿತ್ತು ಎಂದು. ಕೇವಲ 30 ಪ್ರತಿಶತ ಮಕ್ಕಳೂ ಮಾತ್ರ 10 ನೇ ತರಗತಿಯ ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು.ಇದು ಹೇಗಾಯಿತು.ಒಂದು ವೇಳ ಶಿಕ್ಷಕರು ಕಷ್ಟಪಟ್ಟು ಕಾರ್ಯ ನಿರ್ವಹಿಸಿದಲ್ಲಿ ಮತ್ತು ಪಠ್ಯಪುಸ್ತಕವನ್ನು ಸರಿಯಾದ ವೇಳೆಯಲ್ಲಿ ಮುಗಿಸಿದರೂ ಫಲಿತಾಂಶ ಏಕೆ ಕಡಿಮೆ ಆಯ್ತು. ನಾನು ಕೆಲವು ದಿನ ಶಾಲೆಯ ಸುತ್ತಲೂ ತಿರುಗಾರುತ್ತ ಕಳೆದೆ ಮತ್ತು ಪಟ್ಟಿಯನ್ನು ನೋಡಿದಾಗ ನಾನು ಏನನ್ನು ಮನಗಂಡೆನೆಂದರೆ, ಹೆಚ್ಚಿನ ವೇಳೆ ಶಿಕ್ಷಕರು ಮಕ್ಕಳಿಗೆ ಉಪನ್ಯಾಸವನ್ನು ನೀಡಲು ಕಳೆದರು.ಹೆಚ್ಚಿನ ವೇಳೆ ಕರಿಹಲಗೆಯಿಂದ ಕಾಪಿ ಮಾಡುವುದು ಮತ್ತು ಉಕ್ತಲೇಖನವನ್ನು ನೀಡಲು ಕಳೆದರು.

ತರಗತಿಯಲ್ಲಿ ಪದೇ ಪದೇ ಸಿಂಗ್ ರವರು 'ಅರ್ಥವಾಯಿತಾ' ಎನ್ನುವುದನ್ನು ನಾನು ಕೇಳುತಿದ್ದೆ.ಅವರು ಎಲ್ಲರೂ ಒಟ್ಟಾಗಿ, 'ಹೌದು ನಮಗೆ ಅರ್ಥವಾಯಿತು'. ಪಾಠವಾದ ಮೇಲೆ ನಾನು ಸಿಂಗ್ ರವರನ್ನು ಕೇಳಿದೆ. ಅವರಿಗೆ ಅರ್ಥವಾಯಿತು ಎಂಬುದು ನಿಮಗೆ ಹೇಗೆ ಗೊತ್ತಾಯಿತು.ಅವರಿಗೆ ಆಶ್ಚರ್ಯವಾಯಿತು ಮತ್ತು ಹೇಳಿದರು. 'ಅವರು ಅರ್ಥವಾಯಿತು ಎಂದು ಹೇಳಿದರು' ಮತ್ತು ಯಾರೊಬ್ಬರು ಯಾವುದೇ ಪ್ರಶ್ನೆಯ್ನನ್ನು ಕೇಳಲಿಲ್ಲ.

ತುಂಬಾ ವರ್ಷಗಳಿಂದ ವಿಜ್ಞಾನವನ್ನು ಸಿಂಗ್ ಎಂಬುವವರು ಬೋಧಿಸುತ್ತಿದ್ದರು ಮತ್ತು ಅವರು ತುಂಬಾ ಬಿಗುವಿನ ನಿಲುವಿನವರಾಗಿದ್ದರು.ನಾನು ಅವರನ್ನು ನೋಡಿ ಆಶ್ಚರ್ಯ ಪಟ್ಟೆ. ಆದ್ದರಿಂದ ವಿದ್ಯಾರ್ಥಿಗಳನ್ನು ಕೇಳಿದಾಗ ನನಗೆ ಆಶ್ಚರ್ಯವಾಗಲಿಲ್ಲ.ಏಕೆಂದರೆ ವಿದ್ಯಾರ್ಥಿಗಳು ಸ್ವಲ್ಪವೂ ಅರ್ಥವಾಗಲಿಲ್ಲ ಎಂದು ಒಪ್ಪಿಕೊಳ್ಳಲಿಲ್ಲ.ನಾನು ಕಳೆದ ವರ್ಷದ ಪರೀಕ್ಷಾ ಫಲಿತಾಂಶದತ್ತ ಗಮನಸೆಳೆದಾಗ ಅವರು ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ ಎಂಬುದು ಗೊತ್ತಾಗುತ್ತದೆ.ಅದಕ್ಕೆ ಸಿಂಗ್ ರವರು ಮಕ್ಕಳು ಸಾಕಷ್ಟು ಕಷ್ಟಪಟ್ಟು ಕಾರ್ಯ ಮಾಡಿಲ .ಮತ್ತು ಅವರು ಗ್ರಾಮೀಣ ಸಮುದಾಯದವರು,ಆದ್ದರಿಂದ ಅವರಿಂದ ಉತ್ತಮವಾಗಿ ಮಾಡುವುದನ್ನು ನಿರೀಕ್ಷಿಸಿರಲಿಲ್ಲ. ಎಲ್ಲಾ ವಿದ್ಯಾರ್ಥಿಗಳು ಕಲಿಯಲು ಸಾಮರ್ಥ್ಯ ಹೊಂದಿರುತ್ತಾರೆ; ಶಿಕ್ಷಕರು ಅವರಿಗೆ ಸಹಾಯ ಮಾಡಬೇಕು.ಆದರೆ ಇದನ್ನು ಸಿಂಗ್ ರವರಿಗೆ ಹೇಗೆ ತಿಳಿ ಹೇಳಲಿ?

ಈ ಹಿಂದಿನ ಶಾಲಾ ನಾಯಕರು ಮಾಡಿದಂತೆ, ನಾನು ಶಿಕ್ಷಕರಿಗೆ ಪ್ರತಿವಾರ ಪಾಠ ಯೋಜನೆಯನ್ನು ನೀಡಲು ಹೇಳಿದೆನು.ನಾನು ಗುರುವಾರ ಮತ್ತು ಶುಕ್ರವಾರ ಪ್ರಾರ್ಥನೆಯನ್ನು ರದ್ದು ಪಡಿಸಿದೆನು ಮತ್ತು ವಿಷಯದ ಗುಂಪಿನಲ್ಲಿ ಅವರ ಯೋಜನೆಯ ಬಗ್ಗೆ ಮಾತನಾಡಲು ನನಗೆ ಸಮಯ ಲಭ್ಯವಾಯಿತು. ಯಾವ ಪ್ರಮುಖ ಪರಿಕಲ್ಪನೆಗಳನ್ನು ಅವರು ದಾಟಿ ಬಂದರು ಎಂದು ಹೇಳಲು ನಾನು ಪ್ರೇರೇಪಿಸಿದೆನು ಮತ್ತು ಮೊದಲು ಪಠ್ಯ ಪುಸ್ತಕದಲ್ಲಿ ಪ್ರಮುಖ ವಿಚಾರವೇನು ಎಂದು ತಿಳಿಸಲು ಸೂಚಿಸಿದೆನು.ಇದರ ಬಗ್ಗೆ ಗಮನ ಕೇಂದ್ರೀಕರಿಸ ಬೇಕೆ ವಿನಾ ಎಲ್ಲವನ್ನೂ ಕವರ್ ಮಾಡಿ ಮುಗಿಸುವುದಲ್ಲ.ನಾನು ಕೆಲವೊಂದು ಟೆಸ್ ಇಂಡಿಯಾದ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs) ಗಳನ್ನು ತೋರಿಸಿ, ಒಂದು ವೇಳೆ ಪಠ್ಯಪುಸ್ತಕದಲ್ಲಿರದಿದ್ದರೂ ಪ್ರತಿ ಘಟಕವನ್ನು ವಿದ್ಯಾರ್ಥಿಗಳಿಗೆ ಆಸಕ್ತಿಯೊಂದಿಗೆ ಪಾಠ ಮಾಡಲು ಹುರಿದುಂಬಿಸಿದೆನು.ಒಂದು ವೇಳೆ ಸಹಾಯವಾಗುವುದಾದರೆ,ಅವರು ವಿಭಿನ್ನ ಕ್ರಮದಲ್ಲಿ ಪಾಠಗಳನ್ನು ಕಲಿಸಲು ತಿಳಿಸಿದೆನು.ಯಾವ ಶಿಕ್ಷಕರು ಕ್ರಿಯಾಶೀಲರಾಗಿ ಕಾರ್ಯ ಮಾಡಿದರೋ ಅವರಿಗೆ ಸಾಕಷ್ಟು ಪ್ರಶಂಸೆಯನ್ನು ಹೇಳಿದೆನು.

ಟರ್ಮಿನ ಕೊನೆಯಲ್ಲಿ, ನಾನು ಶಿಕ್ಷಕರಿಗೆ ಎಲ್ಲಾ ಕಿರು ಪರೀಕ್ಷೆಯ ಫಲಿತಾಂಶವನ್ನು ಗ್ರಿಡ್‌ನಲ್ಲಿ ತುಂಬಲು ಹೇಳಿದೆನು. ವರಿ ಎಂಬುವವರು ಯುವಕರು ಮತ್ತು ಅನನುಭವಿ ವಿಜ್ಞಾನ ಶಿಕ್ಷಕ.ಆದರೆ ಅವರು ಬಹಳಷ್ಟು ಪ್ರತಿಕ್ರಿಯಾತ್ಮಕ ಮಾರ್ಗಗಳನ್ನು ಅಳವಡಿಸಿಕೊಂಡಿದ್ದರು.ಪಠ್ಯಪುಸ್ತಕದ ನಾಲ್ಕು ಪಾಠದಲ್ಲಿ ಎಲ್ಲಾ ಪುಟಗಳನ್ನು ಅವರು ಬಳಸಿರಲಿಲ್ಲ.ಆದರೆ ಸಿಂಗ್‌ರಿಗಿಂತ ಉತ್ತಮ ರೀತಿಯಲ್ಲಿ ತರಗತಿಯನ್ನು ನಡೆಸಿದರು.

## ಚಟುವಟಿಕೆ2: ನಾಯಕತ್ವದ ಗುಣಗಳನ್ನು ಗುರುತಿಸುವುದು

ಕೋಷ್ಟಕ 1 ನ್ನು ಪುನಃ ಓದುವುದು. ಉತ್ತಮ ನಾಯಕನ ಗುಣಗಳನ್ನು ಪಟ್ಟಿಮಾಡಲಾಗಿದೆ.

ನಿಮ್ಮ ಗೆಳೆಯ ಅಥವಾ ಸಹೊದ್ಯೋಗಿಯೊಂದಿಗೆ ವ್ಯಕ್ತಿ ಅಧ್ಯಯನ 1 ನ್ನು ವಿಶ್ಲೇಷಣೆ ಮಾಡಿ ಮತ್ತು ನಾಗರಾಜುರವರು ತೋರಿದ ಸ್ವಭಾವಗಳನ್ನು ಗುರುತಿಸಿ.ಇದನ್ನು ನಿಮ್ಮ ಕಲಿಕಾ ದಿನಚರಿಯಲ್ಲಿ ಬರೆಯಿರಿ ಅಥವಾ ಪ್ರಮುಖ ನುಡಿಗಳನ್ನು ಪೆನ್ ಅಥವಾ ಪೆನ್ಸಿಲ್ ನಿಂದ ಕೆಳಗೆ ಗೆರೆಯನ್ನು ಎಳೆಯಿರಿ.

**ಚರ್ಚೆ**

ನಾಗರಾಜುರವರು ಸಮಸ್ಯೆಯನ್ನು ಪರಿಹರಿಸಲು ಧುಮುಕದೇ, ಏನು ನಡೆಯುತ್ತಿದೆ ಎನ್ನುವುದನ್ನು ಪರಿಶೀಲಿಸಿದರು ಮತ್ತು , ತನ್ನ ಶಿಕ್ಷಕರನ್ನು ಆಲಿಸಿದರು.ವ್ಯಕ್ತಿಗಳನ್ನು ಬದಲಾಯಿಸುವಲ್ಲಿ ಇರುವ ಕಷ್ಟಗಳನ್ನು ಅವರು ಗುರುತಿಸಿದರು. ಆದರೆ ಪರಿಹಾರವನ್ನು ಕಂಡುಹಿಡಿಯಲು ನಿರ್ಧರಿಸಿದರು. ಪಠ್ಯಪುಸ್ಕವನ್ನು ಪ್ರತಿ ಘಟಕಕ್ಕೂ ಬಳಸದೇ, ಅವಶ್ಯಕವಿದ್ದಲ್ಲಿ ಮಾತ್ರ ಬಳಸುವಂತೆ ,ತನ್ನ ಶಿಕ್ಷಕರನ್ನು ಹುರಿದುಂಬಿಸುವ ಗಂಡಾಂತರಕ್ಕೆ ಕೈಹಾಕಿದರು. ಆದರೆ ಹಾಗೆ ಮಾಡಲು ಸಕಾರಣವಿತ್ತು. ಎಲ್ಲಾ ವಿದ್ಯಾರ್ಥಿಗಳು ತಮ್ಮ ಹಿನ್ನೆಲೆಯನ್ನು ಮೀರಿ ಕಲಿಯಬಲ್ಲರು ಮತ್ತು ಈಗ ಅಸ್ತಿತ್ವದಲ್ಲಿರುವ ವ್ಯವಸ್ಥೆಯಲ್ಲಿ ಕೆಲಸ ಮಾಡಿದರು.ಉದಾಹರಣೆಗೆ ಶಾಲಾ ಅವಧಿಯ ನಂತರ ಶಿಕ್ಷಕರಿಗೆ ಉಳಿಯಲು ಹೇಳುವ ಬದಲು ಪ್ರಾರ್ಥನೆಯನ್ನೇ ರದ್ದುಪಡಿಸಿ, ವೇಳೆಯನ್ನು ಉಳಿಸಿಕೊಂಡರು.

ಪ್ರಯತ್ನಶೀಲ ಚಟುವಟಿಕೆ 2, ಉತ್ತಮ ನಾಯಕರ ಸ್ವಭಾವಗಳನ್ನು ಹೇಗೆ ಪ್ರದರ್ಶಿತ್ತಾರೆ ಮತ್ತು ಅವರು ಏನನ್ನು ಮಾತನಾಡುತ್ತಾರೆ ಎಂಬುದನ್ನು ವಿಶ್ಲೇಷಿಸಲು ಶಾಲಾ ನಾಯಕರ ವಿಡಿಯೋಗಳನ್ನು ನೀವು ನೋಡಬೇಕು

**ವಿಡಿಯೋ: ಶಾಲಾ ನಾಯಕತ್ವ**

# 3 ಅಗತ್ಯತೆಯ ವಿಶ್ಲೇಷಣೆಯನ್ನು ನಡೆಸುವುದು

ಕೋಷ್ಟಕ1 ಶಾಲಾ ನಾಯಕರು ವಯಕ್ತಿಕ ಗುಣಗಳನ್ನು ಪರಿಣಾಮಕಾರಿಯಾಗಿಸುವುದಲ್ಲದೇ ಒಂದು ಹಂತದ ಸಾಮರ್ಥ್ಯವನ್ನು ಹೊಂದುವುದು ಅವಶ್ಯಕ ಎನ್ನುವುದನ್ನು ಸೂಚಿಸುತ್ತದೆ.(ಸಂಪನ್ಮೂಲ 2 ನ್ನು ನೋಡಿ). ನೀವು ಕೂಡ ಪ್ರತಿಭಾವಂತರು ಅಥವಾ ಎಲ್ಲಾ ಕ್ಷೇತ್ರಗಳಲ್ಲಿ ನಿಸ್ಸೀಮರು.ನಿಮ್ಮ ಶಿಕ್ಷಕರು ಮತ್ತು ವಿದ್ಯಾರ್ಥಿಗಳಂತೆ ನಿಮ್ಮ ಜ್ಞಾನ ಮತ್ತು ಕೌಶಲ್ಯ ಕೂಡ ಹೆಚ್ಚಾಗುತ್ತದೆ ಮತ್ತು ಹೊಸ ಸವಾಲುಗಳನ್ನು ಎದುರಿಸಲು ಸಮಯ ಬೇಕು ಮತ್ತು ನಂತರ ಪರಿಪೂರ್ಣರಾಗುತ್ತೀರಿ ಎಂಬ ಅಂಶವನ್ನು ನೆನಪಿಡಬೇಕಾಗುತ್ತದೆ.

## ಚಟುವಟಿಕೆ 3 : ಅಗತ್ಯತೆಯ ವಿಶ್ಲೇಷಣೆಯನ್ನು ನಡೆಸುವುದು

ಸಂಪನ್ಮೂಲ 2 ರಲ್ಲಿಯ ಕೋಷ್ಟಕವನ್ನು ಮುಗಿಸಿ, ಏಕೆಂದರೆ ಶಾಲಾ ನಾಯಕರ ಪಾತ್ರದಲ್ಲಿ ನೀವು ಗುರುತಿಸಲು , ನೀವು ಉತ್ತಮವಾಗಿ ಕಾರ್ಯ ನಿರ್ವಹಿಸಬಲ್ಲಿರಿ ಮತ್ತು ನೀವು ಅವಶ್ಯಕವಾಗಿ ಬೆಳೆಸಿಕೊಳ್ಳಬೇಕಾದ –ಇನ್ನೂ ಹೆಚ್ಚಿನ ಕ್ಷೇತ್ರಗಳ್ಳು ನೀವು ಕಲಿಯಬಲ್ಲಿರಿ.

ಮೊದಲು ನಿಮ್ಮನ್ನು ನೀವು 'ಅತ್ಯಂತ ಸಮರ್ಥ', 'ಸಾಧಾರಣ ಸಮರ್ಥ' , ಅಥವಾ 'ಸಮರ್ಥ ರಹಿತ' ಎಂದು ನಿಗದಿಪಡಿಸಿಕೊಳ್ಳಿ. ನಿಸ್ಸಂದೇಹವಾಗಿ ನೀವು ಈಗಾಗಲೇ ಸಾಕಷ್ಟು ಜ್ಞಾನವನ್ನು ಹೊಂದಿದ್ದೀರಿ.ಆದರೆ ನೀವು ಸದಾ ವಿಸ್ತರಿಸಲು ಅಥವಾ ಜೀವನಪೂರ್ತಿ ಕಲಿಕೆಯ ದೃಷ್ಟಿಯಿಂದ ನಿಮ್ಮ ಕೌಶಲ ಮತ್ತು ಸಾಮರ್ಥ್ಯವನ್ನು ಉತ್ತಮಪಡಿಸಲು ಪ್ರಯತ್ನಿಸುವಿರಿ. ಒಬ್ಬ ಪರಿಣಾಮಕಾರಿ ಮತ್ತು ಸಮರ್ಥ ನಾಯಕರಾಗಲು,ನಿಮ್ಮ ಅವಶ್ಯಕತೆ ಮತ್ತು ಬೆಳವಣಿಗೆ ಆದ್ಯತೆ ಏನು ಎಂಬುದನ್ನು ವಿಶ್ಲೇಷಿಸಲು ಈ ಕೋಷ್ಟಕವನ್ನು ಪೂರ್ತಿ ಮಾಡಿದಾಗ ಸಹಾಯವಾಗುತ್ತದೆ.

ಈ ಪ್ರಕ್ರಿಯೆಯನ್ನು ನೀವು ನಿಮ್ಮ ಸಹೋದ್ಯೋಗಿಯೊಂದಿಗೆ ಯಾವ ಅಗತ್ಯತೆಗಳನ್ನು ನೀವು ಆದ್ಯತೀಕರಿಸಿದ್ದೀರಾ ಮತ್ತು ಅದರ ಅಗತ್ಯತೆಯನ್ನು ಚರ್ಚಿಸಲು ಬಯಸುತ್ತೀರಾ.ಶಾಲಾ ನಾಯಕ ಪ್ರತ್ಯೇಕಿಸಲ್ಪಟ್ಟವನಾಗುತ್ತಾನೆ. ಆದ್ದರಿಂದ ಸಹ ಮಾರ್ಗದರ್ಶಿತ್ವ ಸಂಬಂಧವನ್ನು ಬೆಳೆಸಿಕೊಳ್ಳುವುದು ಪರಸ್ಪರ ಲಾಭದಾಯಕವಾದುದು. ಎರಡು ಶಾಲಾ ನಾಯಕರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಹೇಗೆ ಪರಸ್ಪರ ಸಹಾಯ ಮಾಡುತ್ತಾರೆ ಎಂಬುದನ್ನು ನೋಡಲು ಎರಡನೇ ವ್ಯಕ್ತಿ ಅಧ್ಯಯನವನ್ನು ಓದಿ.

## ಯಶೋಗಾಥೆ 2:ಶ್ರೀ.ಕಪೂರ್ ಮತ್ತು ಶ್ರೀಮತಿ ಅಗರವಾಲ್ ತಮ್ಮ ಅಗತ್ಯತೆಗಳ ಬಗ್ಗೆ ಚರ್ಚಿಸುವರು

ಶ್ರೀ.ಕಪೂರ್ ಮತ್ತು ಶ್ರೀಮತಿ ಅಗರವಾಲ್ ತರಬೇತಿಗೆ ಬಂದಾಗ ಇತ್ತೀಚೆಗೆ ಬೇಟಿಯಾಗಿದ್ದರು ಮತ್ತು ಇಬ್ಬರಲ್ಲಿಯೂ ಹೆಚ್ಚಿನ ವಿಚಾರಗಳು ಸಾಮಾನ್ಯವಾಗಿ ಇರುವುದನ್ನು ಕಂಡುಕೊಂಡರು. ಪ್ರತಿಯೊಬ್ಬರನ್ನು ಪರಸ್ಪರ ಬೆಂಬಲಿಸಲು ಪ್ರತಿ ತಿಂಗಳು ಒಬ್ಬರನ್ನೊಬ್ಬರು ಬೇಟಿಯಾಗಲು ನಿರ್ಧರಿಸಿದರು ಮತ್ತು ಚಟುವಟಿಕೆ 3 ನ್ನು ಒಟ್ಟಾಗಿ ಮಾಡಲು ತೀರ್ಮಾನಿಸಿದರು.ಉದಾಹರಣೆಗಳನ್ನು ಹುಡುಕಲು ಪರಸ್ಪರ ಸಹಾಯ ಮತ್ತು ಪ್ರಶ್ನೆಗಳೊಂದಿಗೆ ಪರಸ್ಪರರನ್ನು ಹುರಿದುಂಬಿಸಿದರು. ಮಾದರಿ ವರ್ತನೆಯ ಗುಣಲ್ಷಣಗಳನ್ನು ಕುರಿತ ಅವರ ಸಂಭಾಷಣೆಯನ್ನು ಓದಿರಿ.

ನನ್ನ ಗೆಳೆಯ– ವಯಕ್ತಿಕ ಏಕತೆಯನ್ನು ಹೇಗೆ ನೀನು ಪ್ರದರ್ಶಿಸುತ್ತೀಯಾ?

ನಾನು ಪ್ರಾಯಶಃ ,ನನ್ನ ವಿದ್ಯಾರ್ಥಿಗಳನ್ನು ಮತ್ತು ಸಹೋದ್ಯೋಗಿಗಳನ್ನು ಒಂದೇ ರೀತಿಯಲ್ಲಿ ನೋಡುತ್ತೇನೆ.– ಎಲ್ಲರನ್ನೂ ನಾನು ಗೌರವದಿಂದ ಕಾಣಲು ಮತ್ತು ಉತ್ತಮ ಮಟ್ಟದಿಂದ ಕಾಣಲು ಪ್ರಯತ್ನಿಸುತ್ತೇನೆ.

ಈ ವಾರ, ಯಾವಾಗ ನಡೆಯಿತು ಎಂದು ಒಂದು ಉದಾಹರಣೆಯನ್ನು ನೀನು ನನಗೆ ನೀಡುತ್ತೀಯಾ?

ಈಗ ನೀನು ನನ್ನನ್ನು ಘಟನೆಯ ಬಳಿ ತಂದಿದ್ದೀಯಾ. ಗೆಳೆಯ,ನೀನು ಹೇಳಿದ್ದು ಸರಿ ಇದೆ.ನಾವು ಪದಗಳಲ್ಲಿ ಹೇಳಬಹುದು ಆದರೆ ನಮ್ಮ ಕಾರ್ಯಗಳಲ್ಲಿ ಅದನ್ನು ತೋರಿಸಲು ಅಲ್ಲ. ಸ್ವಲ್ಪ ಯೋಚಿಸು .. ಒಳ್ಳೆಯದು.ನಾನು ನನ್ನ ಶಾಲೆಯಲ್ಲಿ ಎಲ್ಲಾ ವಿದ್ಯಾರ್ಥಿಗಳು ಸಮಾನರು ಎಂದು ಸ್ಪಷ್ಟಪಡಿಸಿದ್ದೇನೆ ಆದರೆ ಒಂದು ಕುಟುಂಬದಿಂದ ಒಂದು ದೂರು ಬಂತು. ಅವರ ಎರಡು ಮಕ್ಕಳನ್ನು ತರಗತಿಯಲ್ಲಿ ನಿರ್ಲಕ್ಷಿಸಲಾಗುತ್ತಿದೆ ಎಂದು.ನಾನು ವಿಷಯವನ್ನು ಪರಿಶೀಲಿಸಿದೆನು ಮತ್ತು ಎರಡು ವಿದ್ಯಾರ್ಥಿಗಳೊಂದಿಗೆ ಮತ್ತು ಸಿಬ್ಬಂದಿಗಳೊಂದಿಗೆ ಮಾತನಾಡಿದೆನು.ನಾನು ಈ ವಿಷಯದ ಉಸ್ತುವಾರಿಯನ್ನು ನೋಡಿಕೊಳ್ಳುತ್ತೇನೆ ಮತ್ತು ಮತ್ತೆ ಒಂದು ತಿಂಗಳಲ್ಲಿ ಕುಟುಂಬವನ್ನು ಭೇಟಿಯಾಗುತ್ತೇನೆ ಎಂದು ಜವಾಬ್ದಾರಿಯನ್ನು ತೆಗೆದುಕೊಂಡೆನು.

ಹೌದು. ವಯಕ್ತಿಕ ಸಮಗ್ರತೆಯನ್ನು ನೀನು ಪ್ರದರ್ಶಿಸಿರುವುದು ಉತ್ತಮವಾಗಿದೆ ಮತ್ತು ನಿನ್ನ ಮೌಲ್ಯವನ್ನು ನೀನು ಸ್ಪಷ್ಟಪಡಿಸಿದ್ದೀಯಾ. 'ಉತ್ಸಾಹವನ್ನು ತೋರಿಸುವ' ಬಗ್ಗೆ ನೀನು ಏನು ಹೇಳುತ್ತೀಯಾ? ನೀನು ಹೆಚ್ಚಿನದನ್ನು ಮಾಡಿದಂತೆ ಅಥವಾ ಕಡಿಮೆ ಮಾಡಿದಂತೆ.

ನಿನಗೆ ಗೊತ್ತು.ಕಲಿಕೆಯಲ್ಲಿ ನಾನು ಆಸಕ್ತನಿದ್ದಾಗ್ಯೂ, ನಾನು ಅಷ್ಟೊಂದು ಉತ್ಸಾಹವನ್ನು ತೋರಿಸುತ್ತೇನೆ ಎಂಬುದು ನನಗೆ ಗೊತ್ತಿಲ್ಲ.ಮತ್ತೊಂದು ದಿನ ನಾನು ಗಮನಿಸಿದ್ದೇನೆ. ಹೆಚ್ಚು ಹೆಚ್ಚು ಗುಂಪು ಚಟುವಟಿಕೆಗಳನ್ನು ನೀಡುವ ಕುರಿತು ಶಿಕ್ಷಕರೊಂದಿಗೆ ಮಾತನಾಡುತ್ತಾ ಇರುವಾಗ ನಾನು ಅವರಿಂದ ಹೆಚ್ಚಿನ ಪ್ರತಿಕ್ರಿಯೆಯನ್ನು ಕಾಣಲಿಲ್ಲ.

ಗುಂಪು ಚಟುವಟಿಕೆಗೆ ಸಂಭಂದಿಸಿದ ಟೆಸ್ ಇಂಡಿಯಾದ ವಿಡಿಯೋಗಳನ್ನು ನೀನು ನೋಡಿದೀಯಾ?ಅವು ಚರ್ಚೆಯನ್ನು ನಡೆಸಲು ಉತ್ತಮ ಮತ್ತು ಜನರು ಮಾತನಾಡುವಂತೆ ಮಾಡಲು ಅವುಗಳನ್ನು ನೀನು ಬಳಸಿಕೊಳ್ಳಬಹುದು.

ಇದು ಒಳ್ಳೆಯ ಯೋಚನೆ.ನಾನು ಕೂಡಾ ಗುಂಪು ಚಟುವಟಿಕೆಯನ್ನು ಬಳಸಿಕೊಂಡು, ಅವರ ಪ್ರಯತ್ನಕ್ಕೆ ನನ್ನ ಉತ್ಸಾಹವನ್ನು ತೋರಿಸುತ್ತಾ, ಹೆಚ್ಚಿನ ಹಿಮ್ಮಾಹಿತಿಯನ್ನು ಶಿಕ್ಷಕರಿಗೆ ನೀಡಲು ಯೋಚಿಸಿದ್ದೇನೆ.

ಈಗ ಶಿಕ್ಷಕರ ಬೆಳವಣಿಗೆಯ OERಗಳನ್ನು ಪಟ್ಟಿ ಮಾಡೋಣ. ಅದರಲ್ಲಿ ಯಾವುದನ್ನು ಉತ್ಸಾಹದಿಂದ ನೀನು ಆಯ್ಕೆ ಮಾಡುತ್ತೀಯಾ. ನಾನು ಒಂದನ್ನು ಪ್ರಾಯೋಗಿಕವಾಗಿ ಮಾಡಲು ಮತ್ತು ನನ್ನ ವಿಜ್ಞಾನ ಪಾಠದಲ್ಲಿ ಪ್ರಯೋಗಿಸಲು ಇಚ್ಚೆಪಡುತ್ತೇನೆ.

ನಾನು ಈಗಾಗಲೇ ತುಂಬಾ ಉತಾಹಭರಿತನಾಗಿದ್ದೇನೆ.

# 4. ಕಲಿಕೆಯ ಯೋಜನೆಯನ್ನು ಮಾಡುವುದು

ನಿಮ್ಮ ಔದ್ಯೋಗಿಕ ಬೆಳವಣಿಗೆಯ ಅಗತ್ಯತೆಗಳನ್ನು ಗುರಿತಿಸಿದ ಮೇಲೆ ಈ ಅಗತ್ಯತೆಗಳನ್ನು ಪೂರೈಸಲು ಈಗ ಕಲಿಕಾ ಯೋಜನೆಯನ್ನು ನೀವು ಮಾಡಬೇಕಾಗುತ್ತದೆ.ಸಂಪನ್ಮೂಲ 3 ಇದು ಟೆಸ್ ಇಂಡಿಯಾದ ಶಾಲಾ ನಾಯಕತ್ವದ OERs ಗಳ ಪಟ್ಟಿಯನ್ನು ನೀಡುತ್ತದೆ.

ಕಲಿಕಾ ಬೋಧನೆಯ ಪ್ರಕ್ರಿಯೆಯನ್ನು ವರ್ಗಾಯಿಸುವುದು (ಈ ಘಟಕದ ನಂತರ) ಮಾಡಬೇಕಾದ ಕಾರ್ಯ. ಕಲಿಕಾ ಬೋಧನೆಯನ್ನು ಪ್ರಾಥಮಿಕ ಶಾಲೆಗಳಲ್ಲಿ ಸುಧಾರಣೆ ತರುವುದು ಮತ್ತು ಬೋಧನಾ ಶಾಸ್ತ್ರಗಳ ಮೇಲೆ ಕೇಂದ್ರೀಕರಿಸುವುದು ಟೆಸ್ ಇಂಡಿಯಾದ ಯೋಜನೆಯ ಪ್ರಮುಖ ಕಾರ್ಯವಾಗಿದೆ ಮತ್ತು ಲಭ್ಯವಿರುವ ಉಳಿದ ಸಂಪನ್ಮೂಲಗಳನ್ನು ಹುಡುತುವ ಅವಕಾಶವನ್ನು ನೀಡುತ್ತದೆ.ಎಲ್ಲಾ ಸಾಮಗ್ರಿಗಳು 'ಮುಕ್ತ ಶೈಕ್ಷಣಿಕ ಸಂಪನ್ಮೂಲಗಳಾಗಿವೆ'. ಅಂದರೆ ಅವಯ ಉಚಿತವಾಗಿದೆ.ನೀವು ಅವುಗಳ ಪ್ರತಿಯನ್ನು ಮಾಡಬಹುದು ಮತ್ತು ನಿಮ್ಮ ಸಂಧರ್ಬಕ್ಕೆ ಹೊಂದುವಂತೆ ಬದಲಿಸಿಕೊಳ್ಳಬಹುದು.

## ಚಟುವಟಿಕೆ 4 : ಟೆಸ್ ಇಂಡಿಯಾದ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs)ಗಳ ಮೂಲಕ ನಿಮ್ಮ ಕಲಿಕಾ ಯೋಜನೆ

ಟೆಸ್ ಇಂಡಿಯಾದ ಮುಕ್ತ ಶೈಕ್ಷಣಿಕ ಸಂಪನ್ಮೂಲ (OERs)ಗಳನ್ನು ಬಳಸಿ ನಿಮ್ಮ ಕಲಿಕಾ ಯೋಜನೆಯನ್ನು ರೂಪಿಸಲು ಈ ಕೆಳಗಿನ ಮೆಟ್ಟಿಲುಗಳನ್ನು ಅನುಸರಿಸಿ.

1. ಸಂಪನ್ಮೂಲ 3 ರಲ್ಲಿಯ ಶಾಲಾ ನಾಯಕತ್ವದ (OERs)ಗಳ ಶೀರ್ಷಿಕೆಯನ್ನು ನೋಡಿರಿ ಮತ್ತು ಪ್ರತಿ OERs ಏನನ್ನು ಹೇಳುತ್ತದೆ

ಎಂಬುದನ್ನು ನೋಡಿಕೊಳ್ಳಿ.ಯಾವ ರೀತಿಯಲ್ಲಿ ಘಟಕಗಳು ಸಂಯೋಜಿಸಲ್ಪಟ್ಟಿವೆ ಎಂಬುದನ್ನು ನೋಡಿಕೊಳ್ಳಿ.ಉದಾ.ನಿಮ್ಮ ಶಿಕ್ಷಕರ ಬೆಳವಣಿಗೆಗೆ 3 ಘಟಕಗಳು ಸಂಬಂಧಿಸಿದೆ.

2. ಅಧ್ಯಯನವನ್ನು ಮಾಡುವ ಮೂರು ಘಟಕವನ್ನು ಆಯ್ಕೆ ಮಾಡಿಕೊಳ್ಳಿರಿ. ನಿಮ್ಮ ಕಲಿಕಾ ದಿನಚರಿಯಲ್ಲಿ ಯಾವ ಕ್ರಮದಲ್ಲಿ ಅವುಗಳನ್ನು ಅಧ್ಯಯನ ಮಾಡುತ್ತೀರಾ ಎಂಬ ಬಗ್ಗೆ ಟಿಪ್ಪಣಿಯನ್ನು ಮಾಡಿಕೊಳ್ಳಿ.
3. ನೀವು ಆಯ್ಕೆ ಮಾಡಿದ ಘಟಕಗಳ ಬಗ್ಗೆ ವಿವರವಾಗಿ ನೋಡಿ ಮತ್ತು ಪ್ರತಿ ಘಟಕದ ಮೇಲೆ ಎಷ್ಟು ವೇಳೆಯನ್ನು ಕಳೆಯಬಹುದು ಎಂಬುದನ್ನು ತೀರ್ಮಾನಿಸಿ.
4. ಟರ್ಮಿಗಾಗಿ ಯೋಜನೆಯನ್ನು ಮಾಡಿಕೊಳ್ಳಿ.ನಿಮ್ಮ ಕರ್ತವ್ಯದ ಆದ್ಯತೆಗಳನ್ನು ಪರಿಗಣಿಸಿ.ನೀವು ಹಾಜರಾಗಬೇಕಾದ ಉಳಿದ ಕೋರ್ಸಗಳ ಕಾಲಮಿತಿಯನ್ನು ನೋಡಿಕೊಳ್ಳಿ ಮತ್ತು ಉಳಿದ ಯೋಜನೆ ಅಥವಾ ಕಾರ್ಯಗಳ ಬಗ್ಗೆ ನಿಮ್ಮ ಪಾತ್ರವನ್ನು ಯೋಚಿಸಿಕೊಳ್ಳಿ.

ಸಂಪನ್ಮೂಲ 4 ನ್ನು ನಿಮ್ಮ ಕಲಿಕಾ ಯೋಜನೆಯನ್ನು ದಾಖಲಿಸಲು ಉಪಯೋಗಿಸಿ.ಸರಿಯಾದ ಜಾಗದಲ್ಲಿ ಅದನ್ನು ಪ್ರದರ್ಶಿಸಿ ಮತ್ತು ಪ್ರತಿವಾರ ಅದನ್ನು ದಾಖಲಿಸಿ.

ಅಂತಿಮವಾಗಿ,ಸಾಮಗ್ರಿಗಳನ್ನು ಹೇಗೆ ಆಕರಿಸುತ್ತೀರಾ ಎಂಬ ಬಗ್ಗೆ ತೀರ್ಮಾನಿಸಿ.(ಆನ್ ಲೈನ್ಅಥವಾ ಆಫ್ ಲೈನ್ ಅಥವಾ ಪ್ರೀಂಟ್ ರೂಪದಲ್ಲಿ)ಯಾವುದಾದರೂ ಒಂದರ ಬಗ್ಗೆ ಯೋಚಿಸಿ ಮತ್ತು ನಿಮ್ಮ ಕಲಿಕೆಯನ್ನು ಕ್ರೋಢೀಕರಿಸಿರಿ.

# 5. ನಿಮ್ಮ ಕಲಿಕಾ ಯೋಜನೆಯನ್ನು ರೂಪಿಸುವುದು–ಸಮರ್ಥ ಶಾಲಾ ನಾಯಕನಾಗಿ

ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯನ್ನು ಬದಲಾವಣೆ ಮಾಡಲು ಅತೀ ಪ್ರಮುಖ ಅಂಶವೇನೆಂದರೆ, ಶಾಲಾ ನಾಯಕರಾಗಿ ನೀವು– ನಿಮ್ಮ ಸ್ವಭಾವ ಮತ್ತು ನಿಮ್ಮ ಸಾಮರ್ಥ್ಯಗಳು. ಶಿಕ್ಷಕರು ಸಾಂಪ್ರದಾಯಿಕ ಬೋಧನಾ ವಿಧಾನವನ್ನು ಬಿಟ್ಟು ಶಿಕ್ಷಕರು ಪ್ರಯೋಗ ಮಾಡಲು ಸಮರ್ಥರನ್ನಾಗಿಸದೇ ಇದ್ದಲ್ಲಿ ವಿದ್ಯಾರ್ಥಿಗಳ ಕಲಿಕೆಯಲ್ಲಿ ಯಾವುದೇ ಬದಲಾವಣೆಯಾಗದು.

ನೀವೇ ಸ್ವತಃ ಜೀವನಪೂರ್ತಿ ಕಲಿಕಾದಾರರಾದಾಗ ನಿಮ್ಮ ಶಿಕ್ಷಕರನ್ನು ನೀವು ಸಮರ್ಥರನ್ನಾಗಿಸುವಿರ್ರಿ, ನಿಮ್ಮ ಕಲಿಕೆಯಲ್ಲಿ ಹೊಸತನವನ್ನು ಕಾಣಲು ಮತ್ತು ನಿಮ್ಮ ಶಾಲೆಗಳಲ್ಲಿ ಸಮಸ್ಯೆಗಳನ್ನು ಬಗೆಹರಿಸಲು ಬಳಸಿಕೊಳ್ಳಿ.ಶಿಕ್ಷಕರು ಬದಲಾವಣೆಗೆ ನಿಮ್ಮ ಪ್ರೋತ್ಸಾಹವನ್ನು ಬಯಸುತ್ತಾರೆ.ನೀವು ಅವರಿಗೆ ಅವಕಾಶಗಳನ್ನು ನೀಡಿರಿ ಮತ್ತು ಮಾರ್ಗದರ್ಶನವನ್ನು ಶಿಕ್ಷಕರಿಗೆ ನೀಡಿರಿ.

ಹೊಸ ವಿಚಾರಗಳು ಅಥವಾ ರೂಢಿಗಳನ್ನು ಪ್ರಯತ್ನಿಸಿ.

ಶಿಕ್ಷಕರಿಗೆ ಹಿಮ್ಮಾಹಿತಿಯನ್ನು ನೀಡಿರಿ.

ತರಗತಿ ಕೋಣೆಯಲ್ಲಿಯ ಧನಾತ್ಮಕತೆಯನ್ನು ಹಂಚಿಕೊಳ್ಳಿ ಮತ್ತು ಪರ್ಯಾಲೋಚಿಸಿ.

ಸುಧಾರಣೆಗೆ ವಿಭಿನ್ನವಾಗಿ ಏನು ಮಾಡಬಹುದು ಎಂಬ ಬಗ್ಗೆ ಚರ್ಚಿಸಿ.

ಮುಂದಿನ ವ್ಯಕ್ತಿ ಅಧ್ಯಯನವು ಶಿಕ್ಷಕರಿಗೆ ಆಲಿಸುವಿಕೆಯ ಮಹತ್ವವನ್ನು ಒತ್ತಿಹೇಳುತ್ತದೆ ಮತ್ತು ನಾಯಕತ್ವಕ್ಕೆ ನಾಯಕತ್ವಕ್ಕೆ ಉನ್ನತ ಮಾರ್ಗವನ್ನು ಸೂಚಿಸುತ್ತದೆ. ಸಮರ್ಥರನ್ನಾಗಿಸುವುದು ಎಂದರೆ ಶಿಕ್ಷಕರನ್ನು ದೀರ್ಘಾವಧಿ ಕಾರ್ಯದಲ್ಲಿ ತೊಡಗಿಸುವುದು. ಅದರಿಂದ ಅವರಲ್ಲಿ ಪರಸ್ಪರ ಚರ್ಚೆ ಮತ್ತು ಕಲಿಕೆ ಆಗುತ್ತದೆ.

ಸಮರ್ಥನಾಯಕರಾಗಿ,ನಿಮ್ಮ ಶಾಲೆಯಲ್ಲಿರುವ ಎಲ್ಲಾ ಶಿಕ್ಷಕರಿಗೆ ಕ್ರಿಯಾಶೀಲ ಮತ್ತು ಪಾಲುದಾರಿಕೆಯ ಕಲಿಕೆಯನ್ನು ಪೋಷಿಸುವುದು.

## ವ್ಯಕ್ತಿ ಅಧ್ಯಯನ 3: ಶಾಲೆಯನ್ನು ಹೊಸ ಬೆಳಕಿನಡಿಯಲ್ಲಿ ನೋಡುವುದು.

ಇದೊಂದು ಶಾಲಾ ಶಿಕ್ಷಕರ ಸಂದರ್ಶನವಾಗಿದ್ದು ಇತ್ತೀಚೆಗೆ ಸ್ಥಳೀಯ ಡಯಟ್ ನಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ನಡೆದ ತರಬೇತಿಯ ದಾಖಲೆಯಾಗಿದೆ.ಅವರ ಶಾಲೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಮತ್ತು ಅವರು ಶಾಲಾ ನಾಯಕರಾದ ಮೇಲೆ ಹಾಜರಾತಿ ತುಂಬಾ ಸುಧಾರಿಸಿದೆ.ಅವರು ಜಿಲ್ಲಾ ಶಿಕ್ಷಣಾಧಿಕಾರಿಗಳೊಂದಿಗೆ ಪರೀಕ್ಷೆಯ ಫಲಿತಾಂಶದ ಸುಧಾರಣೆಗಾಗಿ ಸಾಕಷ್ಟು ಮಾತನಾಡಿದ್ದಾರೆ ಆದರೆ ಅವರ ಶಾಲೆಯಲ್ಲಿ ಉಳಿದ ಅನೇಕ ಅಂಶಗಳ ಬಗ್ಗೆ ಗಮನ ನೀಡುವುದು ಮಹತ್ವವಿದೆ ಎಂದು ಮನಗಂಡರು.

ತರಬೇತಿಯ ಅವಧಿಯಲ್ಲಿ ಟೆಸ್ ಇಂಡಿಯಾದ ಔಇಖ ಗಳಲ್ಲಿ ಶಾಲೆಯಲ್ಲಿ ಸ್ವ–ಪ್ರಗತಿ ಪರಿಶೀಲನೆ ಮತ್ತು ಅಭಿವೃದ್ಧಿ ಯೋಜನೆ ಬಗ್ಗೆ ಪ್ರಸ್ತಾಪಿಸಿದರು.[ನಾಯಕತ್ವದ ಮೇಲೆ ದೃಷ್ಟಿಕೋನಗಳು,ಶಾಲೆಯನ್ನು ಮುನ್ನಡೆಸುವುದು,ಸ್ವ–ಪರಿಶೀಲನೆ,ನಾಯಕತ್ವದ ಮೇಲೆ ದೃಷ್ಟಿಕೋನಗಳು].ನಾನು ವಿರಾಮಕ್ಕಾಗಿ ಕಾಯುತ್ತಿದ್ದೆ. ನನ್ನ ಸಹೋದ್ಯೋಗಿಗಳೊಂದಿಗೆ ಪರೀಕ್ಷಾ ಫಲಿತಾಂಶದ ಬಗ್ಗೆ ಹಂಚಿಕೊಳ್ಳಲು ಬಯಸಿದ್ದೆ.

ಸ್ವಪರಿಶೀಲನೆಯ ಘಟಕದ ಮೇಲೆ ಕಾರ್ಯ ಮಾಡುತ್ತಿರುವಾಗ,ನನಗೆ ತುಂಬಾ ಸಂತೋಷವಾಯಿತು– ನನ್ನ ಶಾಲೆಯ ಅನೇಕ ಅಂಶಗಳು ಉತ್ತಮವಾಗಿ

ನಡೆಯುತ್ತಿವೆ.ಆದರೆ ತರಬೇತುದಾರರು ನಮ್ಮ ಶಾಲೆಯ ಶಿಕ್ಷಕರ ಬಗ್ಗೆ ಕೆಲವೊಂದು ಪ್ರಶ್ನೆಗಳನ್ನು ( ಶಾಲೆಯ ಬಗ್ಗೆ ಅವರ ಯೋಚನೆ ಏನು ಎಂದು) ಅವರು ಕೇಳಿದರು. ನಾನು ಹತ್ತು ಶಿಕ್ಷಕರನ್ನು ಹೊಂದಿದ್ದೇನೆ ಆದರೆ ನಾನು ಮಾಡಿದ ಬದಲಾವಣೆಗಳ ಬಗ್ಗೆ ಅವರು ಏನು ಯೋಚಿಸುತ್ತಾರೆ ಎಂದು ನನಗೆ ಗೊತ್ತಿಲ್ಲ.ಆದರೆ ಅವರು ನಾನು ಹೇಳೀದಂತೆ ಯಾವುದೇ ಸವಾಲೆಸೆಯದೇ ಮಾಡಿದ್ದಾರೆ.

ನಮ್ಮ ಶಾಲೆಯಲ್ಲಿ ಬಹಳ ವಿಧ್ಯಾರ್ಥಿಗಳಿರುವುದರಿಂದ ನನಗೆ ನಿಜವಾಗಿ ಮತ್ತೊಬ್ಬ ಗಣಿತ ಶಿಕ್ಷಕರ ಬೇಕಾಗಿದ್ದಾರೆ.

ಊಟದ ವೇಳೆಯಲ್ಲಿ, ಜಿಲ್ಲಾ ಶಿಕ್ಷಾಧಿಕಾರಿ ಯಾವುದೇ ಮತ್ತೊಬ್ಬ ಶಿಕ್ಷಕರು ಬರಲು ಇಲ್ಲಿಯವರೆಗೂ ಯೋಚಿಸಿಲ್ಲ ಎಂದು ವಿವರಿಸಿದರು. ಎರಡು ಶಿಕ್ಷಕರಿಗೆ ಅವರು ಹೇಳಿದಾಗ ಅವರು ಹೋಗಲು ಸಿದ್ದರಿರಲಿಲ್ಲ ಏಕೆಂದರೆ ನಮ್ಮ ಶಾಲೆಯಲ್ಲಿ ತುಂಬಾ ಕಷ್ಟದ ಕೆಲಸವಿರುತ್ತದೆ. 2 ಇಂಗ್ಲೀಷ್ ಶಿಕ್ಷಕರು ಮತ್ತು ಒಬ್ಬ ವಿಜ್ಞಾನ ಶಿಕ್ಷಕರು ನನ್ನನ್ನು ಭೇಟಿಯಾಗಿ ಬೇರೆ ಶಾಲೆಗೆ ವರ್ಗಾಯಿಸಲು ಕೋರಿದ್ದಾರೆ ಎಂಬ ಅಂಶವನ್ನು ತಿಳಿಸಿದರು.ನನಗೆ ತುಂಬಾ ಆಶ್ಚರ್ಯ ಮತ್ತು ಅಸಮಾಧಾನವಾಯಿತು.

ನಾವು ಅಭಿವೃದ್ಧಿ ಯೋಜನೆಯನ್ನು ಮಾಡುತ್ತಿರುವಾಗ, ನಾನು ಸ್ವಲ್ಪ ಸರ್ವಾಧಿಕಾರಿಯಾಗಿ ವರ್ತಿಸಿದಂತೆ ನನಗೆ ಅನಿಸಿತು.ನಾನು ಶಾಲೆಯನ್ನು ಹೇಗೆ ಸುಧಾರಿಸಬೇಕು ಎಂಬ ಬಗ್ಗೆ ಅನೇಕ ತೀರ್ಮಾನಗಳನ್ನು ಮಾಡಿದೆನು. ಆದರೆ ಉಳಿದ ಶಿಕ್ಷಕರು ಯಾವುದೇ ಚರ್ಚೆಯಲ್ಲಿ ತೊಡಗಿಸಿಕೊಂಡಿಲ್ಲ. ಅವರ ವಿಚಾರಗಳನ್ನು ಪಡೆದುಕೊಂಡೆನು ಮತ್ತು ಅವರ ಅನುಭವವನ್ನು ಗೌರವಿಸುತ್ತೇನೆ.ಆದರೆ ಅದರಲ್ಲಿ ಕೆಲವೊಬ್ಬರು ಒತ್ತಡದಲ್ಲಿದ್ದರು.

ವಿಧ್ಯಾರ್ಥಿಗಳು ಶಾಲೆಗೆ ಬಂದರೂ ಶಿಕ್ಷಕರನ್ನು ಉತ್ತಮ ರೀತಿಯಲ್ಲಿ ನೋಡಿಕೊಳ್ಳುವುದು ಅವಶ್ಯಕ.ನಾನು ಮರಳಿ ಶಾಲೆಗೆ ಹೋಗಿ ಉತ್ತಮ ರೀತಿಯಲ್ಲಿ ನಡೆಯುವುದು ಮತ್ತು ಶಿಕ್ಷಕರನ್ನು ಉತ್ತಮ ರೀತಿಯಲ್ಲಿ ಬೆಂಬಲಿಸಿದೆನು.ಮುಂದಿನ ಸಿಬ್ಬಂಧಿ ಸಭೆಯಲ್ಲಿ ಆಡಳಿತಾತ್ಮಕ ವಿಷಯವನ್ನು ಚರ್ಚಿಸದೇ ಅವರಿಗೆ ಗುಂಪಿನಲ್ಲಿ ಕಾರ್ಯ ನಿರ್ವಹಿಸಲು ತಿಳಿಸಿ, ಶಾಲೆಗಾಗಿ ನಾವುಏನು ಒಳ್ಳೆಯದನ್ನು ಮಾಡಬಹುದು ಎಂದು ಚರ್ಚಿಸಿದೆನು.ತುಂಬಾ ಉತ್ತಮ ಚರ್ಚೆ ನಡೆಯಿತು ಮತ್ತು ನನಗೂ ಗೊತ್ತಿರದ ಅನೇಕ ಸಲಹೆ ಸೂಚನೆಗಳನ್ನು ನೀಡಿದರು. ಅವರು ಪರೀಕ್ಷಾ ಫಲಿತಾಂಶದ ಬಗ್ಗೆ ಗಮನ ಸೆಳೆದರು.ಸುಧಾರಿಸಬೇಕಾದ ಅನೇಕ ಅಂಶಗಳ ಬಗ್ಗೆ ಚರ್ಚಿಸಿದೆವು.ವಯಕ್ತಿಕವಾಗಿ ಎಲ್ಲಾ ಶಿಕ್ಷಕರನ್ನು ಭೇಟಿಯಾಗಿ ಅವರ ಕಾರ್ಯದ ವೈಖರಿಯನ್ನು ತಿಳಿಯಲು ಮತ್ತು ಅವರ ಬಗ್ಗೆ ವಯಕ್ತಿಕವಾಗಿ ತಿಳಿಯಲು ಸಹಕಾರಿ.

**ಯೋಚನೆಗಾಗಿ ಒಂದು ಕ್ಷಣ.**

**ಈ ವ್ಯಕ್ತಿ ಅಧ್ಯಯನದ ಬಗ್ಗೆ ಪರ್ಯಾಲೋಚಿಸಿ.ನಿಮ್ಮ ಶಾಲೆಯಲ್ಲಿ ಕಾರ್ಯ ನಿರ್ವಹಿಸಲು ನಿಮ್ಮ ಶಿಕ್ಷಕರು ಇಚ್ಛೆಪಟ್ಟಿದ್ದಾರಾ ಎಂದು ನಿಮಗನಿಸುತ್ತಿದೆಯಾ?ಅವರು ಮೌಲ್ಯೀಕರಿಸಿದಂತೆ,ಬೆಂಬಲಿಸಿದಂತೆ,ಪರ್ಯಾಲೋಚಿಸಿದಂತೆ ಅನಿಸುತ್ತಿದೆಯಾ?.**

# 6. ನಿಮ್ಮ ಶಿಕ್ಷಕರನ್ನು ಕೇಂದ್ರೀಕರಿಸಿ



ಚಿತ್ರ2.ನಿಮ್ಮ ಶಿಕ್ಷಕರು ಔದ್ಯೋಗಿಕ ಬೆಳವಣಿಗೆಗೆ ನಿಮ್ಮ ಉದಾಹರಣೆಯನ್ನು ಅನುಸರಿಸುವರು.

ಸ್ವ ಕಲಿಕೆಯ ಬಗ್ಗೆ ನಿಮ್ಮ ಮನೋಧೋರಣೆ ನೇರವಾಗಿ ನಿಮ್ಮ ಶಿಕ್ಷಕರ ಮನೋಧೋರಣೆಯ ಮೇಲೆ ಮತ್ತು ಔದ್ಯೋಗಿಕ ಬೆಳವಣಿಗೆಗೆಯ ಮೇಲೆ ಪ್ರಭಾವವನ್ನು ಬೀರುತ್ತದೆ.ಕೌಶಲ್ಯಗಳಲ್ಲಿ ನಿಮ್ಮ ಬೆಳವಣಿಗೆ ಮತ್ತು ಬದಲಾವಣೆಗೆ ಸಿದ್ದರಾಗುವುದು ಇದು ಅವರನ್ನು ಬೆಳೆಯಲು ಸಹಕರಿಸುತ್ತದೆ.ನಿಮ್ಮ ದೊಡ್ಡ ಸಂಪನ್ಮೂಲವೇನೆಂದರೆ ಶಿಕ್ಷಕರು ಮತ್ತು ಅವರಿಗೆ ಉತ್ತಮ ಶಿಕ್ಷಕರಾಗಲು ಅವಕಾಶವನ್ನು ಒದಗಿಸಬೇಕು.ಅವರು ನಿಮಗಿಂತಲೂ ಒಳ್ಳೆಯ ಶಿಕ್ಷಕರಾಗಬಹುದು.

You might like to look at some videos of school leaders talking about leading teachers.



**ಗಿಜಚಣ ಖಿಛಿಣಟ ಐಜಚಿಜಜಿಘೂ – ಐಜಚಿಜಟಿಠ ಣಜಚಿಛಿಜಿ**



**ಗಿಜಚಣ ಖಿಛಿಣಟ ಐಜಚಿಜಜಿಘೂ – ಖಿಜ ಟಜಚಿಡಿಟಿಠ ಜಟಿತಾಡಿಟಿಟಜಟಿಣ**



**ಗಿಜಚಣ ಖಿಛಿಣಟ ಐಜಚಿಜಜಿಘೂ – ಐಜಚಿಜಟಿಠ ಣಜಚಿಛಿಘಟಿಠ ಚಿಟಿಜ ಟಜಚಿಡಿಟಿಠ**

ಟೆಸ್ ಇಂಡಿಯಾದ ಶಿಕ್ಷಕರ ಬೆಳವಣಿಗೆಯ OERs ಗಳು ಶಿಕ್ಷಕರಿಗೆ ಹೊಸ ಮಾರ್ಗಗಳನ್ನು ಕಲಿಯಲು ಸಹಾಯ ಮಾಡಲು ಮತ್ತು ಬೋಧನೆಯ ವಿವಿಧ ಮಾರ್ಗಗಳನ್ನು ಪ್ರಯತ್ನಿಸಲು ಒಂದು ಸಾಧನವಾಗಿದೆ.ಅವು ಶಿಕ್ಷಕರನ್ನು 'ಕಲಿಕಾದಾರರೆಂದು'ಗುರುತಿಸಿ ಸಾಧನಗಳನ್ನು ಬಳಸಿ ಸಾಮರ್ಥ್ಯವನ್ನು ಬೆಳೆಸಿಕೊಳ್ಳುವುದು.ಕಲಿಕಾ ಮತ್ತು ಬೋಧನೆಯ ಮೂಲಕ ಸಹೋದ್ಯೋಗಿಗಳೊಂದಿಗೆ ಸಾಂಘಿಕವಾಗಿ ಕಾರ್ಯ ನಿರ್ವಹಿಸುವುದಾಗಿದೆ.

ಶಿಕ್ಷಕರಿಗೆ ಕಲಿಕೆ ಸಂಕೀರ್ಣವಾದ ಮತ್ತು ಜೀವನಪೂರ್ತಿ ಪ್ರಕ್ರಿಯೆಯಾಗಿದೆ. ಶಿಕ್ಷಕರ ಕಲಿಕೆ ಮತ್ತು ಬೆಳವಣಿಗೆಯ ವಿವಿಧ ಚೌಕಟ್ಟುಗಳನ್ನು ಪರಿಕಲ್ಪನಾತ್ಮಕವಾಗಿ ಸೂಚಿಸಲಾಗಿದೆ ಆದರೆ ಶಿಕ್ಷಕರಿಗೆ ಸಹಾಯಕವಾದ ಜ್ಞಾನದ ಆರು ಕ್ಷೇತ್ರಗಳನ್ನು ನಿರ್ದಿಷ್ಟವಾಗಿ ವಿವರಿಸಲಾಗಿದೆ.(ಶ್ಲೂಲ್ಮ್ಯಾನ್ ಮತ್ತು ಶ್ಲೂಲ್ಮ್ಯಾನ್ 2007.):

- ಪ್ರೇರಣೆ
- ಅರಿವು /ತಿಳುವಳಿಕೆ
- ರೂಢಿ
- ಪರ್ಯಾಲೋಚನೆ
- ಸಮುದಾಯ

ಕೋಷ್ಟಕ 2 ರಲ್ಲಿ ಇವುಗಳನ್ನು ವಿವರಿಸಲಾಗಿದೆ.

**ಕೋಷ್ಟಕ 2.ಸಾಧನಾ ಶಿಕ್ಷಕನ ಲಕ್ಷಣಗಳ ಮೇಲೆ ಟಿಪ್ಪಣೆಗಳು: (ಶ್ಲೂಲ್ಮ್ಯಾನ್ ಮತ್ತು ಶ್ಲೂಲ್ಮ್ಯಾನ್ 2007ರಿಂದ ಆಯ್ಕೆ ಮಾಡಿದೆ.):.**

| ಲಕ್ಷಣಗಳು | ಟಿಪ್ಪಣೆಗಳು |
|---|---|
| ಕಾಣ್ಕೆ | ಒಳ್ಳೆಯ ಶಿಕ್ಷಕರು ಏನು ಸಾಧಿಸಬೇಕು ಎಂಬ ಬಗ್ಗೆ ಸ್ಪಷ್ಟ ಕಾಣ್ಕೆಯನ್ನು ಹೊಂದಿರಬೇಕು. ಕಲಿಕಾದಾರರ ಬಗ್ಗೆ ನಂಬಿಕೆಗಳನ್ನು ಜ್ಞಾನ ಮತ್ತು ಕಲಿಕೆಯನ್ನು ಹೊಂದಿರಬೇಕು. ಅವರು ಪರ್ಯಾಲೋಚನೆಯ ಬಗ್ಗೆ ಆಸಕ್ತಿಯನ್ನು ಹಾಗೂ ಅನುಭವದ ಹಿನ್ನೆಲೆಯಲ್ಲಿ ಕಾಣ್ಕೆಯನ್ನು ತನ್ನದಾಗಿಸಿಕೊಂಡಿರಬೇಕು. |
| ಪ್ರೇರಣೆ<br>ತಿಳುವಳಿಕೆ<br>ರೂಢಿ | ಸುಧಾರಿಸಿಕೊಳ್ಳಲು ಮತ್ತು ಬೆಳವಣಿಗೆಗಾಗಿ ಶಿಕ್ಷಕರಿಗೆ ಪ್ರೇರೆಪಣೆಯನ್ನು ನೀಡಬೇಕಾಗುತ್ತದೆ.<br>ಶಿಕ್ಷಕರು ಏನನ್ನು ಮಾಡಬೇಕು ಮತ್ತು ಹೇಗೆ ಮಾಡಬೇಕು ಎಂಬುದನ್ನು ತಿಳಿದಿರಬೇಕು.ಅವರು ಬೋಧಿಸುವ ವಿಷಯದ ಬಗ್ಗೆ ತಿಳಿದಿರಬೇಕು ಮತ್ತು ಪರಿಣಾಮಕಾರಿಯಾಗಿ ಹೇಗೆ ಬೋಧಿಸಬಹುದು ಎಂಬುದನ್ನು ತಿಳಿದಿರಬೇಕು.<br>ಶಿಕ್ಷಕರು ರೂಢಿ ಮಾಡುವುದು ಸಂಕೀರ್ಣ ಮತ್ತು ಹೆಚ್ಚಿನ ವೇಳೆಯನ್ನು ತೆಗೆದುಕೊಳ್ಳುತ್ತದೆ ಎಂಬುದನ್ನು ಶಿಕ್ಷಕರು ತಿಳಿದಿರಬೇಕು. ತರಗತಿ ಕೋಣೆಯಲ್ಲಿ ಯಾವ ತಾತ್ವಿಕತೆಗಳನ್ನು ಕಲಿಯಬೇಕು ಎಂಬುದನ್ನು ತಿಳಿದಿರಬೇಕು. ಶಿಕ್ಷಕರು ತಮ್ಮ ಅನುಭವದ ಮೂಲಕ ವಿವಿಧ ಮಾರ್ಗಗಳನ್ನು ಅನುಸರಿಸಿ ಕಲಿಯುವರು. |
| ಪರ್ಯಾಲೋಚನೆ | ಶಿಕ್ಷಕರು ಅವರು ಏನು ಮಾಡುತ್ತಾರೆ ಮತ್ತು ಅನುಭವದದ ಮೂಲಕ ಏನನ್ನು ಕಲಿಯುತ್ತಾರೆ ಎಂಬುದನ್ನು |

| | |
|---|---|
| | ಪರ್ಯಾಲೋಚಿಸುತ್ತಾರೆ.ಪರ್ಯಾಲೋಚನೆ ಇಲ್ಲದೇ ಶಿಕ್ಷಕರು ಬದಲಾವಣೆಯ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಾರೆ. |
| ಸಮುದಾಯ: | ಶಿಕ್ಷಕರು ಸಮುದಾಯದ ಭಾಗವೆಂದು ತಿಳಿಯುತ್ತಾ ಅದೇ ಮೌಲ್ಯ ಮತ್ತು ಗುರಿಗಳನ್ನು ಹಂಚಿಕೊಳ್ಳುತ್ತಾರೆ ಮತ್ತು ಬೆಂಬವವನ್ನು ನೀಡುತ್ತಾರೆ ಮತ್ತು ಸಮುದಾಯಕ್ಕೆ ಬೆಂಬಲವಾಗಿ ನಿಲ್ಲುತ್ತಾರೆ. |
| ಕಾಣ್ಕೆ | ಒಳ್ಳೆಯ ಶಿಕ್ಷಕರು ಏನು ಸಾಧಿಸಬೇಕು ಎಂಬ ಬಗ್ಗೆ  ಸ್ಪಷ್ಟ ಕಾಣ್ಕೆಯನ್ನು ಹೊಂದಿರಬೇಕು. ಕಲಿಕಾದಾರರ ಬಗ್ಗೆ ನಂಬಿಕೆಗಳನ್ನು ಜ್ಞಾನ ಮತ್ತು ಕಲಿಕೆಯನ್ನು ಹೊಂದಿರಬೇಕು. ಅವರು ಪರ್ಯಾಲೋಚನೆಯ ಬಗ್ಗೆ ಆಸಕ್ತಿಯನ್ನು ಹಾಗೂ ಅನುಭವದ ಹಿನ್ನೆಲೆಯಲ್ಲಿ ಕಾಣ್ಕೆಯನ್ನು ತನ್ನದಾಗಿಸಿಕೊಂಡಿರಬೇಕು. |



**ವೈಚಾರಿಕ ನಿಲುಗಡೆ**

- **ನಿಮ್ಮ ಶಾಲೆಯಲ್ಲಿರುವ ಶಿಕ್ಷಕರಿಗೆ ಜ್ಞಾನದ ಈ ಕ್ಷೇತ್ರಗಳು ಹೇಗೆ ಅನ್ವಯವಾಗುತ್ತದೆ?**
- **ನಿಮ್ಮ ಶಿಕ್ಷಕರಲ್ಲಿ ಎಷ್ಟು ಶಿಕ್ಷಕರನ್ನು ಒಳ್ಳೆಯ ಶಿಕ್ಷಕರೆಂದು ಬಣ್ಣಿಸುತ್ತೀರಿ?**
- **ನಿಮ್ಮ ಸಿಬ್ಬಂದಿಯನ್ನು ಸಮಗ್ರವಾಗಿ ನೋಡಿ ಯಾವ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿಹೊಂದಿದ್ದಾರೆ ಎಂದು ತಿಳಿಸಿ?**

ಟೆಸ್ ಇಂಡಿಯಾದ ಔಇಖ ಶಿಕ್ಷಕರ ಕಲಿಕೆಯ ಎಲ್ಲಾ ಕ್ಷೇತ್ರಗಳನ್ನು ಬೆಂಬಲಿಸುತ್ತದೆ. ಔಇಖ ಅಸ್ಥಿತ್ವದಲ್ಲಿರುವ ಗ್ರಹಿಕೆಗಳಿಗೆ ಸವಾಲೆಸೆಯುತ್ತವೆ ಮತ್ತು ತಮ್ಮ ವರ್ಗಕೋಣೆಯಲ್ಲಿ ಹೊಸ ಮಾರ್ಗಗಳನ್ನು ಕಂಡುಹಿಡಿಯಲು ಪ್ರೇರೇಪಿಸುತ್ತದೆ.ಶಾಲಾ ನಾಯಕರಾಗಿ ನಿಮ್ಮ ಶಿಕ್ಷಕರನ್ನು ಬೆಂಬಲಿಸುವ ಮತ್ತು ಒಟ್ಟಾಗಿ ಕಾರ್ಯ ನಿರ್ವಹಿಸುವ ಅವಕಾಶಗಳನ್ನು ನಿರ್ಮಿಸಿಕೊಡಬೇಕು.

# 7 ಸಾರಾಂಶ:

ಭಾರತದ ಶಾಲಾ ನಾಯಕರಲ್ಲಿ ಇತ್ತೀಚಿನ ಶಿಕ್ಷಣದ ಬದಲಾವಣೆ ಹೆಚ್ಚಿನ ಜವಾಬ್ದಾರಿಯನ್ನು ತಂದಿದೆ ಆದರೆ ನಿಮ್ಮ ಶಾಲೆಗಳಲ್ಲಿ ನಿಜವಾದ ಬದಲಾವಣೆಯನ್ನು ತರಲು ಅವಕಾಶಗಳನ್ನು ನೀಡಿದೆ ಮತ್ತು ನಿಮ್ಮ ಪ್ರಭಾವದಿಂದ ವಿದ್ಯಾರ್ಥಿಗಳಿಗೆ ಕಲಿಕಾ ಫಲಶ್ರುತಿಯನ್ನು ತರಲು ಸಹಕಾರಿಯಾಗಿದೆ.ಬದಲಾವಣೆಯ ವೃತ್ತಿ ನಮ್ಮದಾಗಿದ್ದು ಶಾಲೆಯಲ್ಲಿ ಬದಲಾವಣೆಯನ್ನು ತರಲು ಗುಣ ಮತ್ತು ಸಾಮರ್ಥ್ಯವನ್ನು ಹೊಂದಿದ್ದೇವೆ.ಟೆಸ್ ಇಂಡಿಯಾದ ಶಾಲಾ ನಾಯಕತ್ವದ OERs ಈ ಸವಾಲುಗಳನ್ನು ಎದುರಿಸಲು ಸಹಾಯ ಮಾಡುತ್ತವೆ.ವಿಶೇಷವಾಗಿ ಶಿಕ್ಷಕರನ್ನು ವಿಭಿನ್ನವಾಗಿ ಕಾರ್ಯನಿರ್ವಹಿಸಲು ಮತ್ತು ಹೊಸ ಮಾರ್ಗಗಳನ್ನು ಅನ್ವಯಿಸಿಕೊಳ್ಳಲು NCF2005 ಮತ್ತು NCFTE2009 ರಾಷ್ಟ್ರೀಯ ನೀತಿಗಳು ನಿರ್ದೇಶಿಸುತ್ತದೆ.ಈ ಘಟಕವು ಕ್ರಿಯಾಶೀಲ ಕಲಿಕೆದಾರರ ಮಹತ್ವವನ್ನು ಕೇಂದ್ರೀಕರಿಸುತ್ತದೆ.ಜ್ಞಾನ ಮತ್ತು ಸಾಮರ್ಥ್ಯದ ಅಂತರವನ್ನು ತುಂಬಿ ಪರಿಹಾರ ಸೂಚಿಸುವ ತಂತ್ರವಾಗಿ ಕಾರ್ಯ ನಿರ್ವಹಿಸುತ್ತದೆ.ಈ ಘಟಕದಲ್ಲಿ ಕಾರ್ಯ ನಿರ್ವಹಿಸುತ್ತಾ, ಟೆಸ್ ಇಂಡಿಯಾದ ಶಾಲಾ ನಾಯಕತ್ವದ OERs ಬಳಸಿ ನೀವು ಕಲಿಕಾ ಯೋಜನೆಯನ್ನು ರೂಪಿಸುತ್ತೀರಿ.ನೀವು ಯೋಜನೆಯಂತೆ ಕಾರ್ಯವನ್ನು ನಿರ್ವಹಿಸಿ ನಿಮ್ಮ ಪ್ರಗತಿಯನ್ನು ಉಸ್ತುವಾರಿ ಮಾಡುತ್ತಾ ಸಮರ್ಪಕವಾದುದನ್ನು ಸಹೋದ್ಯೋಗಿಗಳೊಂದಿಗೆ ಕಲಿಕೆ ಮತ್ತು ಹಂಚಿಕೆಯನ್ನು ಮಾಡಿಕೊಳ್ಳುತ್ತೀರಿ.

.

# ಸಂಪನ್ಮೂಲಗಳು

## ಸಂಪನ್ಮೂಲಗಳು 1: ಟೆಸ್ ಇಂಡಿಯಾದ ಸಂಪನ್ಮೂಲಗಳ ಸಾರಾಂಶ:

**ಶಾಲಾ ನಾಯಕತ್ವದ OERs (ನಿಮಗಾಗಿ)**

**ಶಾಲಾ ನಾಯಕರಿಗಾಗಿ ಒಟ್ಟಿನಲ್ಲಿ 20** OERs ಗಳನ್ನು ರೂಪಿಸಲಾಗಿದೆ. (ಮುಖ್ಯ ಶಿಕ್ಷಕರು,ಪ್ರಾಚಾರ್ಯರು,ಮತ್ತು ಉಪಪ್ರಾಚಾರ್ಯರು ಮತ್ತು ಈ ತರಹದ ಪಾತ್ರಗಳನ್ನು ನಿರ್ವಹಿಸುವವರು)ಈ OERsಗಳು ಶಾಲಾ ನಾಯಕರು ನಿರ್ವಹಿಸಬೇಕಾದ  ಅವರ ಪಾತ್ರಗಳ ವಿವಿಧ ಮಜಲುಗಳನ್ನು ಬೆಂಬಲಿಸುತ್ತದೆ,ಒಂದು ಶಾಲೆಯನ್ನು ಬದಲಾವಣೆ ಮತ್ತು ಸುಧಾರಣೆಯ ಮೂಲಕ ಮುನ್ನಡೆಸಲು ಪ್ರಕ್ರಿಯೆ ಮತ್ತು ವ್ಯವಸ್ಥೆಯನ್ನು ಒಳಗೊಂಡಿರುತ್ತದೆ.ಅಲ್ಲದೇ ಕಲಿಕೆ ಮತ್ತು ಬೋಧನೆಯಲ್ಲಿ ನಿಜವಾದ ಬದಲಾವಣೆಯನ್ನು ತರಲು ನಾಯಕರನ್ನು ಬೆಂಬಲಿಸುತ್ತದೆ ಮತ್ತು ಕಲಿಕೆಯನ್ನು ಹೆಚ್ಚು ಪರಿಣಾಮಕಾರಿ,ಸಹಯೋಜಿತ ರೀತಿಯಲ್ಲಿ ನೀಡಲು ಶಾಲೆಯನ್ನು ಹೆಚ್ಚು ಕೇಂದ್ರೀಕರಣಗೊಳಿಸುತ್ತದೆ.ಇವು ಸಂಪನ್ಮೂಲ 3 ರಲ್ಲಿ ಪಟ್ಟಿಮಾಡಲಾಗಿದೆ.

ಪ್ರಧಾನ ಸಂಪನ್ಮೂಲಗಳು:

ಟೆಸ್ ಇಂಡಿಯಾದ OERs ಹತ್ತು ಪ್ರಧಾನ ಸಂಪನ್ಮೂಲಗಳಿಂದ ಬೆಂಬಲಿಸಲ್ಪಟ್ಟಿವೆ.ಈ ಪ್ರಧಾನ ಸಂಪನ್ಮೂಲಗಳು ಎಲ್ಲಾ ವಿಷಯ ಮತ್ತು ಹಂತಗಳಿಗೆ ಅನ್ವಯಿಸುತ್ತದೆ, ಅಲ್ಲದೇ ನೀವು ಮತ್ತು ನಿಮ್ಮ ಶಿಕ್ಷಕರಿಗೆ ಟೆಸ್ ಇಂಡಿಯಾದ OERs ಗಳ ಪ್ರಧಾನ ಶಾಸ್ತ್ರಗಳ ಮೇಲೆ ಪ್ರಾಯೋಗಿಕ ಮಾರ್ಗದರ್ಶನ ವನ್ನು ನೀಡುತ್ತದೆ.ಅವು ವಿದ್ಯಾರ್ಥಿಗಳನ್ನು ಸಂಘಟಿಸುವ ರೀತಿ,ಕಲಿಕಾ ಚಟುವಟಿಕೆ ಮತ್ತು ಶಿಕ್ಷಕ–ವಿದ್ಯಾರ್ಥಿ ಮತ್ತು ವಿದ್ಯಾರ್ಥಿ–ವಿದ್ಯಾರ್ಥಿ ಗಳ ಅಂತರಕ್ರಿಯೆಗಳನ್ನು ಒಳಗೊಂಡಿರುತ್ತದೆ. ಈ ಪ್ರಧಾನ ಸಂಪನ್ಮೂಲಗಳು OERs ಗಳ ಜೊತೆ ವ್ಯವಸ್ಥಿತವಾಗಿ (ಸಂಪನ್ಮೂಲಗಳಂತೆ)ಜೋಡಿಸಲ್ಪಟ್ಟಿವೆ ಮತ್ತು ಪ್ರಶಿಕ್ಷಕರಿಗೆ ಅಥವಾ ಶಿಕ್ಷಕರಿಗೆ ತರಬೇತಿ ಮತ್ತು ಉಳಿದ ಸಂದರ್ಭಗಳಲ್ಲಿ ಬಳಸಲು ವಯಕ್ತಿಕ ದಾಖಲೆಯಾಗಿ ಲಭ್ಯವಾಗಿದೆ.

ಧೃಕ್ ಶ್ರವಣ ಸಾಮಗ್ರಿಗಳು:

ಪ್ರಧಾನ ಸಂಪನ್ಮೂಲಗಳ ವಸ್ತು ವಿಷಯವನ್ನು ಹೋಲುವ ಅನೇಕ ರೀತಿಯ ವರ್ಗ ಕೋಣೆಯ ಭಾಗವಹಿಸುವಿಕೆಯ ತತ್ವವನ್ನು ನಿದರ್ಶಿಸುವ ವಿಡಿಯೋ ಕಿಪ್ ಗಳಿವೆ. ಈ ಕ್ಲಿಪ್ ಗಳು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಭಾರತೀಯ ತರಗತಿ ಕೋಣೆಯಲ್ಲಿ ಭಾಗವಹಿಸುವಿಕೆಯ ರೂಡಿಯನ್ನು ತೋರಿಸುತ್ತದೆ ಮತ್ತು ನಿರ್ದಿಷ್ಟ ಕ್ರಿಯೆ ಮತ್ತು ವರ್ತನೆಯನ್ನು ವೀಕ್ಷಿಸಲು ನೋಡುಗರಿಗೆ ವಿವರಣೆಯನ್ನು ಒಳಗೊಂಡಿರುತ್ತದೆ.ವಿಡಿಯೋ ಕ್ಲಿಪ್ ಗಳು ಹಿಂದಿ ತರಗತಿ ಕೋಣೆಯಲ್ಲಿ ಶೂಟ್ ಮಾಡಲಾಗಿದೆ ಮತ್ತು ಆಡಿಯೋ ವನ್ನು ವಿವಿಧ ರಾಜ್ಯಗಳಿಗೆ ಭಾಷಾಂತರ ಮಾಡಲಾಗಿದೆ.

ಈ ವಿಡಿಯೋ ಕ್ಲಿಪ್‌ಗಳಿಗೆ ಲಿಂಕ್ ಗಳನ್ನು OERs ಗಳಲ್ಲಿಯೇ ಸೇರಿಸಲಾಗಿದ್ದು, ಸರಿಯಾದ ಸ್ಥಳಗಳಲ್ಲಿಯೇ ವಿಡಿಯೋ ಸಂಕೇತ  ದಿಂದ ಗುರುತಿಸಲಾಗಿದೆ ಮತ್ತು ಓನ್‌ಲೈನ್ ದಲ್ಲಿ ಬಳಸಲು ಲಭ್ಯವಿದೆ. ಬಳಕೆದಾರರು ಈ ವಿಡಿಯೋ ಕ್ಲಿಪ್ ಗಳನ್ನು ಡೌನ್ ಲೋಡ್ ಮಾಡಿ ಟ್ಯಾಬ್ಲೆಟ್,ಪಿ.ಸಿ.ಡಿವಿಡಿ ಮತ್ತು ಮೊಬೈಲ್ ಫೋನ್ ಗಳಲ್ಲಿ ಎಸ್.ಡಿ. ಕಾರ್ಡ ಉಪಯೋಗಿಸಿ ಬಳಸಬಹುದು.

ಶಿಕ್ಷಕರ ಬೆಳವಣಿಗೆಯ OERs (ನಿಮ್ಮ ಶಿಕ್ಷಕರಿಗಾಗಿ)

ಮೂರು ವಿಷಯದ ಕ್ಷೇತ್ರಗಳಲ್ಲಿ 45 OERs ಪ್ರೌಢಗಳಿವೆ. ಪ್ರೌಢ ಇಂಗ್ಲೀಷ್,ಪ್ರೌಢ ಗಣಿತ ಮತ್ತು ಪ್ರೌಢ ವಿಜ್ಞಾನಗಳಲ್ಲಿ 15 ಇದೆ.ಈ OERs ಗಳು ಶಿಕ್ಷಕರಿಗಾಗಿ ಮತ್ತು ಪ್ರಶಿಕ್ಷಕರಿಗೆ ಅಲ್ಲದೇ ಶಿಕ್ಷಕರಿಗೆ ತಮ್ಮ ತರಗತಿ ಕೋಣೆಯಲ್ಲಿ ಪ್ರಾಯೋಗಿಕ ಅನುಭವವನ್ನು ನೀಡಲು ಬಳಸಲಾಗುತ್ತದೆ.

**ಸಂಪನ್ಮೂಲ 2: ನಾಯಕತ್ವದ ಸಾಮರ್ಥ್ಯದ ಸಮೀಕ್ಷೆ:**

**ಕೋಷ್ಟಕ R2.1:ನಾಯಕತ್ವದ ಸಾಮರ್ಥ್ಯದ ಸಮೀಕ್ಷೆ: ( ಮ್ಯಾಕ್ಬೆಥ ಮತ್ತು ಮ್ಯಾರ್ಸ 1999 ದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.).**

| ನಾಯಕತ್ವದ ಸಾಮರ್ಥಗಳು | | | ನಿನ್ನನ್ನು ಹೇಗೆ ಆಯ್ಕೆ ಮಾಡಿಕೊಳ್ಳುವರು.(ಒಂದು ಕಾಲಂನ್ನು ಟಿಕ್ | | ಯಾವ ಸಂದರ್ಬದಲ್ಲಿ ಇದನ್ನು ನೀನು ಮಾಡುತ್ತೀಯಾ? |
|---|---|---|---|---|---|
| | | ಅತ್ಯಂತ ಸಮರ್ಥ | ಸಾಧಾರಣ ಸಮರ್ಥ | ಕಡಿಮೆ ಸಮರ್ಥ | |
| ಇತರರೊಂದಿಗೆ ಕಾರ್ಯನಿರ್ವಹಿಸುವುದು. | ಇತರರನ್ನು ಬೆಂಬಲಿಸುವುದು | | | | |
| | ಇತರ ವ್ಯಕ್ತಿಗಳ ಆತ್ಮಗೌರವವನ್ನು ಹೆಚ್ಚಿಸುವುದು. | | | | |
| | ಇತರರಿಗೆ ಬೆಳವಣಿಗೆ ಮತ್ತು ಪರ್ಯಾಲೋಚನೆಗೆ ಅವಕಾಶಗಳನ್ನು ನೀಡಿ ಬೆಳೆಸುವುದು. | | | | |
| | | | | | |
| | ಉದ್ವೇಗವನ್ನು ಕಡಿಮೆ ಮಾಡುವುದು. | | | | |
| ಪ್ರತಿಕ್ರಿಯಾತ್ಮಕ ಮತ್ತು ಆಸಕ್ತ ಕೇಳುಗನಾಗಿ | ನಿರ್ಧಾರವನ್ನು ತೆಗೆದುಕೊಳ್ಳುವ ಮೊದಲು ಅರಿವನ್ನು ಹೊಂದುವುದು. | | | | |
| | ವಯಕ್ತಿಕ ವಿಚಾರ ಮತ್ತು ಸಮಸ್ಯೆಗಳನ್ನು ಕೇಳುವದು | | | | |
| | ಕ್ರಿಯಾಶೀಲ ಪ್ರೋತ್ಸಾಹದಾಯಕ ಹಿಮ್ಮಾಹಿತಿ. | | | | |

| ನಾಯಕತ್ವದ ಸಾಮರ್ಥಗಳು | | | ನಿನ್ನನ್ನು ಹೇಗೆ ಆಯ್ಕೆ ಮಾಡಿಕೊಳ್ಳುವರು.(ಒಂದು ಕಾಲಂನ್ನು ಟಿಕ್ | | ಯಾವ ಸಂದರ್ಭದಲ್ಲಿ ಇದನ್ನು ನೀನು ಮಾಡುತ್ತೀಯಾ? |
|---|---|---|---|---|---|
| | | ಅತ್ಯಂತ ಸಮರ್ಥ | ಸಾಧಾರಣ ಸಮರ್ಥ | ಕಡಿಮೆ ಸಮರ್ಥ | |
| ಇತರರನ್ನು ಸಬಲೀಕರಣ ಮಾಡುವುದು | ಇತರರನ್ನು ಸಬಲೀಕರಣ ಮಾಡುವುದು ಮತ್ತು ಜವಾಬ್ದಾರಿಯನ್ನು ತೆಗೆದುಕೊಳ್ಳುವುದು.. ವಯಕ್ತಿಕ್ಕೈ ಐಕ್ಯತೆಯನ್ನು | | | | |
| ವರ್ತನೆಯ ಮಾದರೀಕರಣ | ಪ್ರದರ್ಶಿಸುವುದು.ವರ್ತನೆ ಮತ್ತು ಮೌಲ್ಯಗಳನ್ನು ನೀವು ಬಯಸಿದಂತೆ ಮಾದರೀಕರಣಮಾಡುವುದು | | | | |
| | | | | | |
| | ಉತ್ಸಾಹವನ್ನು ತೋರಿಸುವುದು. | | | | |
| ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಪ್ರಗತಿಶೀಲರಾಗಿ | ಸ್ಪಷ್ಟ ಕಾಣ್ಕೆ ಮತ್ತು ದಾರಿಯನ್ನು ತೋರಿಸುವುದು. | | | | |
| | ತೀರ್ಮಾನಗಳನ್ನು ಮಾಡುವದು. | | | | |
| | ಪ್ರಮುಖ ವಿಷಯಗಳಲ್ಲಿ ಅರಿವನ್ನು ಹೆಚ್ಚಿಸುವುದು. | | | | |

| ನಾಯಕತ್ವದ ಸಾಮರ್ಥಗಳು | | | ನಿನ್ನನ್ನು ಹೇಗೆ ಆಯ್ಕೆ ಮಾಡಿಕೊಳ್ಳುವರು.(ಒಂದು ಕಾಲಂನ್ನು ಟಿಕ್ | | ಯಾವ ಸಂದರ್ಭದಲ್ಲಿ ಇದನ್ನು ನೀನು ಮಾಡುತ್ತೀಯಾ? |
|---|---|---|---|---|---|
| | | ಅತ್ಯಂತ ಸಮರ್ಥ | ಸಾಧಾರಣ ಸಮರ್ಥ | ಕಡಿಮೆ ಸಮರ್ಥ | |
| ಬದಲಾವಣೆಯನ್ನು ನಿರ್ವಹಿಸುವುದು. | ಕಾರ್ಯ ಮಾಡುವಲ್ಲಿ ಹೊಸದಾರಿಯನ್ನು ಪ್ರೋತ್ಸಾಹಿಸುವುದು. | | | | |
| | Anticipating possible future challenges | | | | |
| | ತಪ್ಪುಗಳನ್ನು ಅವಕಾಶಗಳೆಂದು ಭಾವಿಸುವುದು. | | | | |
| Encouraging teamwork | ತಂಡಕಾರ್ಯವನ್ನು ಎಲ್ಲರನ್ನೂ ಒಳಗೊಂಡು ಬೆಂಬಲಿಸುವುದು ಮತ್ತು ಮುನ್ನಡೆಸುವುದು. | | | | |

# ಸಂಪನ್ಮೂಲ 3:

**ಶಾಲಾ ನಾಯಕತ್ವದ ಕಲಿಕಾ ಫಲಶ್ರುತಿ**

***ಕೋಷ್ಟಕ R3.1*** *ಟೆಸ್ ಇಂಡಿಯಾದ ಶಾಲಾ ನಾಯಕತ್ವದ ಕಲಿಕಾ ಫಲಶ್ರುತಿ .*

| NCSL ಪ್ರಧಾನ ಕ್ಷೇತ್ರಗಳು | OER ಶೀರ್ಷಿಕೆ | ಕಲಿಕಾ ಫಲಶ್ರುತಿ |
|---|---|---|
| ಪುನಶ್ಚೇತನ | ಪ್ರಾಥಮಿಕ ಶಾಲಾ ಶಿಕ್ಷಕ ಸಮರ್ಥ ನಾಯಕನಾಗಿ | • ನಿಮ್ಮ ಶಾಲಾ ನಾಯಕತ್ವದ ಕೌಶಲಗಳನ್ನು ಪರಿಶೀಲಿಸುವುದು ಮತ್ತು ಸುಧಾರಣೆಯ ಕ್ಷೇತ್ರಗಳನ್ನು ಗುರುತಿಸುವುದು.<br>• *ಟೆಸ್ ಇಂಡಿಯಾದ ಶಾಲಾ ನಾಯಕತ್ವದ ಬಳಸಿ ನಿಮ್ಮ ಕಲಿಕೆಯ ಮಾರ್ಗಗಳನ್ನು ರೂಪಿಸುವುದರ ಮೂಲಕ ನಿಮ್ಮ ಶಾಲಾ ನಾಯಕತ್ವದ ಕೌಶಲಗಳನ್ನು ಹೆಚ್ಚಿಸುವುದು.*<br>• *ನಿಮ್ಮ ಶಾಲೆಯಲ್ಲಿ ಸಮರ್ಥ ಕಲಿಕೆ ಎಂದರೇನು?* |
| | ಪ್ರೌಢ ಶಾಲಾ ಶಿಕ್ಷಕ ಸಮರ್ಥ ನಾಯಕನಾಗಿ | • ನಿಮ್ಮ ಶಾಲಾ ನಾಯಕತ್ವದ ಕೌಶಲಗಳನ್ನು ಪರಿಶೀಲಿಸುವುದು ಮತ್ತು ಸುಧಾರಣೆಯ ಕ್ಷೇತ್ರಗಳನ್ನು ಗುರುತಿಸುವುದು.<br>• *ಟೆಸ್ ಇಂಡಿಯಾದ ಶಾಲಾ ನಾಯಕತ್ವದ ಬಳಸಿ ನಿಮ್ಮ ಕಲಿಕೆಯ ಮಾರ್ಗಗಳನ್ನು ರೂಪಿಸುವುದರ ಮೂಲಕ ನಿಮ್ಮ ಶಾಲಾ ನಾಯಕತ್ವದ ಕೌಶಲಗಳನ್ನು ಹೆಚ್ಚಿಸುವುದು.*<br>• *ನಿಮ್ಮ ಶಾಲೆಯಲ್ಲಿ ಸಮರ್ಥ ಕಲಿಕೆ ಎಂದರೇನು?*<br>• *ಒಂದು ಶಾಲೆಯ ಸುಧಾರಣೆಗೆ ಪ್ರತಿದಿನ ಶಾಲಾ ಕಾಣ್ಕೆ ಹೇಹೆ ಮಾಹಿತಿನೀಡುತ್ತದೆ.* |
| ನಾಯಕತ್ವದ ದೃಷ್ಟಿಕೋನ | ಹಂಚಿಕೊಂಡ ಕಾಣ್ಕೆಯನ್ನು ನಿಮ್ಮ ಶಾಲೆಯಲ್ಲಿ ರೂಪಿಸುವುದು. | • ನಿಮ್ಮ ಶಾಲಾ ಕಾಣ್ಕೆಯನ್ನು ಹೇಗೆ ರಚಿಸುವುದು?<br>• ಕಾಣ್ಕೆಯನ್ನು ಬೆಳೆಸಲು ಮತ್ತು ಅನುಷ್ಠಾನಗೊಳುಸಲು ಇತರರನ್ನು ಹೇಗೆ ಒಳಗೊಳ್ಳುವಂತೆ ಮಾಡುವುದು? |
| | ಶಾಲೆಯ ಸ್ವಪರಿಶೀಲನೆಯನ್ನು ನಡೆದುವುದು. | • ಶಾಲಾ ಸ್ವಪರಿಶೀಲನೆಯ ಉಪಯೋಗಗಳು ಮತ್ತು ಮತ್ತು ಸವಾಲುಗಳು<br>• ಶಾಲಾ ಸ್ವಪರಿಶೀಲನೆಯ ಲಕ್ಷಣಗಳು ಮತ್ತು ಶಾಲಾ ಸ್ವಪರಿಶೀಲನೆಯ ಯ ಚಕ್ರ.<br>• ಗುಣಾತ್ಮಕ ಮತ್ತು ಪರಿಮಾಣಾತ್ಮಕ ಅಂಕಿಅಂಶಗಳನ್ನು ಹೇಗೆ ಸಂಗ್ರಹಿಸುವುದು ಮತ್ತು ಬಳಕೆ ಮಾಡುವುದು. |
| | ಶಾಲಾ ಅಭಿವೃದ್ಧಿ ಯೋಜನೆಯನ್ನು ನಡೆಸುವುದು. | ಪರಿಣಾಮಕಾರಿ ಶಾಲಾ ಯೋಜನೆಯ ಮುಖ್ಯ ಗುಣಲಕ್ಷಣಗಳೇನು?<br>ವಿದ್ಯಾರ್ಥಿಗಳ ಕಲಿಕೆಗೆ, ಶಾಲಾ ವಿಶಾಲ ಸುಧಾರಣೆಗೆ ಯೋಜನೆಯನ್ನು ರೂಪಿಸುವುದು.<br>ಶಾಲಾ ಅಭಿವೃದ್ಧಿ ಯೋಜನೆಯಲ್ಲಿ ಭಾಗಿದಾರರನ್ನು ಮತ್ತು SMC ಸದಸ್ಯರನ್ನು ಒಳಗೊಳ್ಳವಂತ ಮಾಡುವದು.<br>• ವಿದ್ಯಾರ್ಥಿಗಳಿಗೆ ಸಹಾಯಕವಾಗುವ ಪರಿಣಾಮಕಾರಿ ಶಾಲಾ ಯೋಜನೆಯನ್ನು ಬರೆಯುವುದು |

| NCSL ಪ್ರಧಾನ ಕ್ಷೇತ್ರಗಳು | OER ಶೀರ್ಷಿಕೆ | Learning outcomes |
|---|---|---|
| ನಾಯಕತ್ವದ ದೃಷ್ಟಿಕೋನ | ನಿಮ್ಮ ಶಾಲೆಯಲ್ಲಿ ಸುಧಾರಣೆಯನ್ನು ತರಲು | **ಕಲಿಕಾ ಫಲಶೃತಿ** |
| | ನಿಮ್ಮ ಶಾಲೆಗಳಲ್ಲಿ ಯೋಜನೆ ಮತ್ತು ಬದಲಾವಣೆಯನ್ನು ತರುವುದು | • ವೈವಿಧ್ಯತೆಯ ಮಹತ್ವವನ್ನು ಅರಿತು ಪ್ರತಿ ವರ್ಷ ಎಲ್ಲಾ ವಿದ್ಯಾರ್ಥಿಗಳು ಗರಿಷ್ಠ ಕಲಿಕೆಯ ಲಾಭಗಳನ್ನು ಸಾಧಿಸಲು ಪ್ರಯತ್ನಿಸುವುದು.<br>• ನಿಮ್ಮ ಶಾಲೆಯಲ್ಲಿರುವ ವೈವಿಧ್ಯತೆಯ ಅಂಶಗಳನ್ನು ಅರಿಯಲು ಮತ್ತು ಪರಿಹರಿಸಲು ವಿವಿಧ ಅಂಕಿಅಂಶಗಳ ಮತ್ತು ಮಾದರಿಗಳು ಸಹಾಯಕವಾಗುತ್ತದೆ.<br>• ಸಂಗ್ರಹಿಸಿದ ಅಂಕಿಅಂಶಗಳನ್ನು ಎಲ್ಲಾ ವಿದ್ಯಾರ್ಥಿಗಳ ಕಲಿಕಾ ಫಲಶೃತಿಯನ್ನು ಸುಧಾರಿಸಲು ಬಳಸುವುದು ಮತ್ತು ಒಂದು ಕ್ರಿಯಾ ಯೋಜನೆಯನ್ನು ಮಾಡುವುದು. |
| | ನಿಮ್ಮ ಶಾಲೆಯಲ್ಲಿ ಬದಲಾವಣೆಯನ್ನು ತರುವುದು. | • ಶಾಲೆಯ ಬಾಹ್ಯ ಮತ್ತು ಆಂತರಿಕ ಬದಲಾವಣೆಯ ಚಾಲಕ ಶಕ್ತಿಯನ್ನು ಗುರುತಿಸುವುದು.<br>• ಬದಲಾವಣೆಯನ್ನು ಅನುಷ್ಠಾನಕ್ಕೆ ತರಲು ಸವಾಲುಗಳನ್ನು ಗುರುತಿಸುವುದು.<br>• ಶಾಲೆಯಲ್ಲಿ ಬದಲಾವಣೆಯನ್ನು ತರಲು ಯೋಜನೆಯಲ್ಲಿ ಅವಶ್ಯಕ ಹೆಜ್ಜೆಗಳನ್ನು ತರುವುದು.<br>• ಶೈಕ್ಷಣಿಕ ನಾಯಕತ್ವದ ಮಾರ್ಗಗಳನ್ನು ಗುರುತಿಸುವುದು ಮತ್ತು ಅವುಗಳನ್ನು ನಿಮ್ಮ ಮಾರ್ಗಗಳಿಗೆ ಹೊಂದಿಸುವುದು. ಇತರರನ್ನು ಉದಾಹರಣೆಗಳ ಮೂಲಕ, ಹುರಿದುಂಬಿಸುವ ಮೂಲಕ ಮತ್ತು ಪ್ರೇರೆಪಣೆ ಮೂಲಕ ಬದಲಾವಣೆಯನ್ನು ತರುವುದು |
| ನಿಮ್ಮನ್ನು ನಿರ್ವಹಿಸುವುದು ಮತ್ತು ಬೆಳೆಸುವುದು. | ನಿಮ್ಮನ್ನು ನಿರ್ವಹಿಸುವುದು ಮತ್ತು ಬೆಳೆಸುವುದು. | • .ಬದಲಾವಣೆಯ ಪ್ರಕ್ರಿಯೆಯ ಲಕ್ಷಣ ಮತ್ತು ಬದಲಾವಣೆ ಹೇಗೆ ಪ್ರತಿಕ್ರಿಯೆಯಿಸುತ್ತಾರೆ.<br>• ಬದಲಾವಣೆಯ ಕೆಲವು ಮುಖ್ಯ ನಿಯಮಗಳು ಮತ್ತು ಶಾಲೆಗೆ ಅವುಗಳ ಸಮಂಜಸತೆ.<br>• ಇತರರೊಂದಿಗೆ ಹೇಗೆ ಕಾರ್ಯ ನಿರ್ವಹಿಸುವುದು ಮತ್ತು ಬದಲಾವಣೆಯನ್ನು ಅನುಷ್ಠಾನಕ್ಕೆ ತರುವುದು. |
| ಕಲಿಕಾ ಬೋಧನಾ ಪ್ರಕ್ರಿಯೆಯನ್ನು ವರ್ಗಾಯಿಸುವುದು. | ಪ್ರಾಥಮಿಕ ಶಾಲೆಯಲ್ಲಿ ಕಲಿಕೆ ಮತ್ತು ಬೋಧನೆಯಲ್ಲಿ ಬದಲಾವಣೆಯನ್ನು ತರುವುದು. | ನಿಮ್ಮ ಕೆಲಸದ ಆದ್ಯತೀಕರಣ,ಇತರರಿಗೆ ಸಹಕಾರ ಮತ್ತು ನಿಮ್ಮ ವೇಳೆಯ ಪರಿಣಾಮಕಾರಿ ಬಳಕೆ.<br>ನಿಮ್ಮ ವೃತ್ತಿಯ ಮತ್ತು ವಯಕ್ತಿಕ ಬೆಳವಣಿಗೆಗೆ ಯೋಜಿಸುವುದು.<br>ನಿಮ್ಮ ಗುರಿಗಳನ್ನು SMART ಆಗಿ ರೂಪಿಸುವುದು.<br><br>ಟೆಸ್ ಇಂಡಿಯಾದ OERsಗಳ ರಚನೆಯನ್ನು ಮತ್ತು ತತ್ವಶಾಸ್ತ್ರೀಯ ಅಂಶಗಳ ಪರಿಚಯವನ್ನು ಹೊಂದುವುದು. |

| NCSL ಪ್ರಧಾನ ಕ್ಷೇತ್ರಗಳು | OER ಶೀರ್ಷಿಕೆ | ಕಲಿಕಾ ಫಲಶೃತಿ |
|---|---|---|
| ಕಲಿಕಾ ಬೋಧನಾ ಪ್ರಕ್ರಿಯೆಯನ್ನು ವರ್ಗಾಯಿಸುವುದು. | ಪ್ರೌಢಶಾಲೆಗಳಲ್ಲಿ ಕಲಿಕೆ ಮತ್ತು ಬೋಧನೆಯಲ್ಲಿ ಸುಧಾರಣೆಗಳನ್ನು | ಟೆಸ್ ಇಂಡಿಯಾದ OERs ಗಳ ರಚನೆಯನ್ನು ಮತ್ತು ತತ್ವಶಾಸ್ತ್ರೀಯ ಅಂಶಗಳ ಪರಿಚಯವನ್ನು ಹೊಂದುವುದು. |
| | ನಿಮ್ಮ ಶಾಲೆಯಲ್ಲಿ ಮೌಲ್ಯಮಾಪನವನ್ನು ನಡೆಸುವುದು. | ನಿಮ್ಮ ಶಾಲೆಯಲ್ಲಿ OERs ಗಳನ್ನು ಜಾರಿಯಲ್ಲಿ ತರುವುದರ ಅವಶ್ಯಕತೆ ಮತ್ತು ಬಳಸುವುದನ್ನು ಪ್ರಶಂಸಿಸುವುದು.<br>ಕಲಿಕೆಯಲ್ಲಿ ನಿಮ್ಮ ಶಾಲೆಯ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಅಂಶವನ್ನು ಗುರುತಿಸುವುದು.<br>ಕಲಿಕೆ ಮತ್ತು ಬೋಧನೆಯಲ್ಲಿ ಸುಧಾರಣೆಯನ್ನು ಹೇಗೆ ಸುಸ್ಥಿರ ಗೊಳಿಸುವುದು ಎಂಬುದನ್ನು ಯೋಚಿಸುವುದು. |
| | ಸಾಧನೆಯನ್ನು ಹೆಚ್ಚಿಸಲು ಶಿಕ್ಷಕರನ್ನು ಬೆಂಬಲಿಸುವುದು. | • ಶಿಕ್ಷಕರ ಸಾಧನೆಯನ್ನು ಮೌಲ್ಯೀಕರಿಸುವುದು.<br>• ವಯಕ್ತಿಕವಾಗಿ ಶಿಕ್ಷಕರ ಸಾಧನೆಯನ್ನು ಸುಧಾರಿಸಲು ಯೋಜಿಸುವುದು.<br>• ಸಾಧನೆಗೆ ಸಂಬಂದಿಸಿದಂತೆ ರಚನಾತ್ಮಕ ಸಭೆಗಳನ್ನು ಶಿಕ್ಷಕರೊಂದಿಗೆ ಹೇಗೆ ನಡೆಸುವುದು ಎಂಬುದನ್ನು ಯೋಚಿಸುವುದು.<br>• ಶಿಕ್ಷಕರ ಸಾಧನೆಯನ್ನು ವ್ಯವಸ್ಥಿತವಾಗಿರಿಸುವುದು.<br>• ಶಿಕ್ಷಕರ ಔದ್ಯೋಗಿಕ ಬೆಳವಣಿಗೆ ಹೇಗೆ ಶಾಲಾ ಸುಧಾರಣೆಯ ಮೇಲೆ ಮತ್ತು ಮಕ್ಕಳ ಕಲಿಕೆಯ ಮೇಲೆ ಪ್ರಭಾವ ಬೀರುತ್ತದೆ. |
| | ಶಿಕ್ಷಕರಲ್ಲಿ ಔದ್ಯೋಗಿಕ ಬೆಳವಣಿಗೆಯನ್ನು ತರುವುದು. | • ಶಿಕ್ಷಕರ ಔದ್ಯೋಗಿಕ ಬೆಳವಣಿಯನ್ನು ಮೌಲ್ಯೀಕರಿಸಲು ಸಹಾಯಕವಾಗುವ ಕೆಲವು ಅಂಶಗಳು.<br>• ಎಲ್ಲಾ ಶಿಕ್ಷಕರ ಶಿಕ್ಷಕರ ಔದ್ಯೋಗಿಕ ಬೆಳವಣಿಗೆಯನ್ನು ಯೋಜಿಸಿ,ಉಸ್ತುವಾರಿ ಮಾಡಿ, ಮತ್ತು ಕ್ರಮ ಕೈಗೊಳ್ಳುವುದು. |
| | ಉಸ್ತುವಾರಿ ಮತ್ತು ಕೋಚಿಂಗ್ | • ಉಸ್ತುವಾರಿ ಮತ್ತು ಕೋಚಿಂಗ ವ್ಯತಾಸೀಕರಿಸಿ ಅವು ಹೇಗೆ ಸಿಬ್ಬಂದಿಯ ಕಲಿಕೆಯನ್ನು ಬೆಂಬಲಿಸಲು ಸಹಕಾರಿ<br>• ನಿಮ್ಮ ಶಾಲೆಯಲ್ಲಿ ಬೋಧನೆ ಮತ್ತು ಕಲಿಕೆಯನ್ನು ಸುಧಾರಿಸಲು ಸಿಬ್ಬಂದಿಯೊಂದಿಗೆ ಸಂಭಾಷಣೆ ನಡೆಸುವುದು.<br>• ಉಸ್ತುವಾರಿ ಮತ್ತು ಕೋಚಿಂಗ ನ್ನು ನಿರೀಕ್ಷಿತ ಫಲ ಪಡೆಯಲು ಯೋಜನೆ ಮಾಡುವುದು.<br>• ಕೋಚಿಂಗದ ಸಂಸ್ಕೃತಿಯನ್ನು ನಿಮ್ಮ ಶಾಲೆಯಲ್ಲಿ ಪರಿಗಣಿಸುವುದು.<br>. |

| NCSL ಪ್ರಧಾನ ಕ್ಷೇತ್ರಗಳು | OER ಶೀರ್ಷಿಕೆ | ಕಲಿಕಾ ಫಲಶೃತಿ |
|---|---|---|
| ಕಲಿಕಾ–ಬೋಧನಾ ಪ್ರಕ್ರಿಯೆಯ ವರ್ಗಾವಣೆ | ನಿಮ್ಮ ಶಾಲೆಯಲ್ಲಿ ಪರಿಣಾಮಕಾರಿ ಕಲಿಕೆಯ ಸಂಸ್ಕೃತಿಯನ್ನು | • **ಸಾಮಾಜಿಕ ಸಂಸ್ಕೃತಿ ಎಂದರೆ ಏನು ಮತ್ತು ಅದು ಹೇಗೆ ಕಲಿಕೆಯ ಮೇಲೆ ಪ್ರಭಾವವನ್ನು ಬೀರುತ್ತದೆ.**<br>• ನಿಮ್ಮ ಶಾಲೆಯಲ್ಲಿ ಸಂಸ್ಕೃತಿಯನ್ನು ಗುರುತಿಸುವುದು.<br>• ಧನಾತ್ಮಕ ಹಂಚಿಕೊಂಡ ಸಂಸ್ಕ್ರತಿಯನ್ನು ನಿಮ್ಮ ಶಾಲೆಯಲ್ಲಿ ಕಲಿಕೆಯಲ್ಲಿ ತರಲು ಕೆಲವೊಂದು ತಂತಗಳನ್ನು ಬೆಳೆಸುವುದು. |
| | ಸಮನ್ವಯ ಶಿಕ್ಷವನ್ನು ನಿಮ್ಮ ಶಾಲೆಯಲ್ಲಿ ನಡೆಸುವುದು. | • ವಿವಿಧತೆಯ ಹಂಚಿಕೊಂಡ ತಿಳುವಳಿಕೆ ,ಸಮತೆ, ಮತ್ತು ಸಮನ್ವಯತೆಯನ್ನು ನಿಮ್ಮ ಸಿಬ್ಬಂದಿಯೊಂದಿಗೆ ಬೆಳೆಸುವುದು.<br>• ನಿಮ್ಮ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಕಲಿಕಾ ಫಲವನ್ನು ಆದ್ಯತೀಕರಿಸಿ ಕಸುಧಾರಿಸಲು ಕ್ರಮಕೈಗೊಳ್ಳಲು.<br>• ನಿಮ್ಮ ಶಾಲೆಯಲ್ಲಿ ಎಲ್ಲರೂ ಸೇರಿ ಯೋಜನೆ ಮತ್ತು ಪರಿಶೀಲನೆ ಯನ್ನು ಮಾಡಿ ಅಸಂಘಟಿತ ಮತ್ತು ಸಮನ್ವಯ ಮಕ್ಕಳ ಕಲಿಕಗೆ ಕ್ರಮ.<br>• ನಿಮ್ಮ ಸಂಶೋಧನೆಯ ಪ್ರಭಾವವನ್ನು ಮೌಲ್ಯೀಕರಿಸಲು ಮಹತ್ವವನ್ನು ತಿಳಿಸುವುದು. |
| | ಪರಿಣಾಮಕಾರಿ ವಿದ್ಯಾರ್ಥಿಗಳ ಕಲಿಕೆಗೆ ಸಂಪನ್ಮೂಲಗಳನ್ನು ನಿರ್ವಹಣೆ ಮಾಡುವುದು. | • ಶಾಲೆಯ ಹೊರಗೆ ಮತ್ತು ಹೊರಗೆ ಲಭ್ಯವಿರುವ ವಿಸ್ತಾರವಾದ ಸವಂಪನ್ಮೂಲಗಳನ್ನು ಅರಿಯುವುದು.<br>• ನಿಮ್ಮ ಶಾಲೆಯ ಒಳಗಿರುವ ಸಂಪನ್ಮೂಲಗಳನ್ನು ಅರಿಯುವದು ಮತ್ತು ಉಪಯೋಗಿಸದ ವಸ್ತುಗಳನ್ನು ಕೇಂದ್ರೀಕರಿಸವುವುದ.<br>• ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಮತ್ತು ವ್ಯವಸ್ಥಿತವಾಗಿ ಕಲಿಕೆಗೆ ಬಳಸುವಂತೆ ಮಾಡುವುದು.<br>• ನಿಮ್ಮ ಶಾಲೆಯಲ್ಲಿ ಪರಿಣಾಮಕಾರಿಯಾಗಿ ಸಂಪನ್ಮೂಲಗಳನ್ನು ಬಳಸಲು ಯೋಜನೆಯನ್ನು ರೂಪಿಸುವುದು.<br>• ನಿಮ್ಮ ಶಾಲೆಯಲ್ಲಿ ತಂತ್ರಜ್ಞಾನವನ್ನು ಬಳಸಲು ಅಂತರ್ದೃಷ್ಟಿಯನ್ನು ಹೊಂದುವುದು.<br>• ಶಾಲೆಗಳಲ್ಲಿ ICT ಸಾಧನ ಮತ್ತು ತಂತ್ರಗಳನ್ನು ರಚನಾತ್ಮಕ ಬಳಕೆಗೆ ಪರಿಗಣಿಸುವುದು.<br>• ಸ್ವಂತ ಕಲಿಕಗೆ ಇಂಟರ್ನೆಟ್ ನ್ನು ಬೆಂಬಲಿಸುವ ದಾರಿಗಳನ್ನು ಅರಿಯುವುದು.<br>• ಅಂತರ್ಜಾಲವನ್ನು ಸ್ವರತ ಕಲಿಕಗೆ ಮತ್ತು ತರಗತಿ ಕೋಣೆಗೆ ಬಳಸುವಂತೆ ಬೆಂಬಲಿಸುವುದು.<br>• ನಿಮ್ಮ ರಾಜ್ಯದ ಪ್ರಮುಖ ಸಂಸ್ಥೆಗಳೊಂದಿಗೆ ಪರಿಣಾಮಕಾರಿ ಸಂಬಂಧವನ್ನು ನಿರ್ಮಿಸುವುದು.<br>• ಶಾಲೆ ಮತ್ತು ಸರ್ಕಾರೇತರ ಸಂಸ್ಥೆಗಳೊಂದಿಗೆ (NGOs) ಸಂಯೋಜಿತ ಸಂಬಂಧವನ್ನು ನಿರ್ಮಿಸುವುದು.<br>• ಸಮುದಾಯದ ಸಂಸ್ಥೆಗಳೊಂದಿಗೆ ವಿಶೇಷವಾಗಿ SMC.ಗಳೊಂದಿಗೆ ಭಾಗವಹಿಸುವುದು.<br>• ಮಕ್ಕಳ ಕಲಿಕೆಯನ್ನು ಸುಧಾರಿಸಲು ಪಾಲಕರನ್ನು ಭಾಗವಹಿಸುವುದು ಮತ್ತು ಸಮ್ಮಿಳಿತ ಪ್ರಯತ್ನ ಮಾಡುವುದು. |
| | ನಿಮ್ಮ ಶಾಲೆಯಲ್ಲಿ ತಂತಜ್ಞಾನದ ಬಳಕೆಯನ್ನು | **ಕಲಿಕಾ ಫಲಶೃತಿ** |
| ಸಹಭಾಗಿತ್ವದಲ್ಲಿ ಮುನ್ನಡೆಸುವುದು. | ಪಾಲಕಕರೊಂದಿಗೆ ಮತ್ತು ವಿಶಾಲವಾದ ಶಾಲಾ ಸಮುದಾಯದೊಂದಿಗೆ ಭಾಗಿಯಾಗುವುದು | • **ಸಾಮಾಜಿಕ ಸಂಸ್ಕೃತಿ ಎಂದರೆ ಏನು ಮತ್ತು ಅದು ಹೇಗೆ ಕಲಿಕೆಯ ಮೇಲೆ ಪ್ರಭಾವವನ್ನು ಬೀರುತ್ತದೆ.**<br>• ನಿಮ್ಮ ಶಾಲೆಯಲ್ಲಿ ಸಂಸ್ಕೃತಿಯನ್ನು ಗುರುತಿಸುವುದು.<br>• ಧನಾತ್ಮಕ ಹಂಚಿಕೊಂಡ ಸಂಸ್ಕ್ರತಿಯನ್ನು ನಿಮ್ಮ ಶಾಲೆಯಲ್ಲಿ ಕಲಿಕೆಯಲ್ಲಿ ತರಲು ಕೆಲವೊಂದು ತಂತಗಳನ್ನು ಬೆಳೆಸುವುದು.<br>• |

# ಸಂಪನ್ಮೂಲ 4: ನಿಮ್ಮ ಕಲಿಕಾ ಯೋಜನೆ:

***ಕೋಷ್ಟಕ R4.1 ಕಲಿಕಾ ಯೊಜನೆಯ ಮಾರ್ಗಸೂಚಿಗಳು***

| ಮುಂದಿನ ಶೈಕ್ಷಣಿಕ ವರ್ಷಕ್ಕೆ ಆದ್ಯತೆ ಮತ್ತು ಭದ್ಧತೆಗಳು.(ತರಬೇತಿ, ನೀವು ತೊಡಗಿಸಿಕೊಂಡಿರುವ ಹೊಸ ಹೆಜ್ಜೆಗಳು, ನೀವು ಸಾಧಿಸಬೇಕಾದ ವಸ್ತುವಿಷಯಗಳು,ಶಾಲಾ ಸ್ವಪಗತಿ ಪರಿಶೀಲಕರು, **SDP** ಬರೆವವರು.) |
|---|
| |

| ಮುಂದಿನ ಮೂರು ತಿಂಗಳಲ್ಲಿ ಆಧ್ಯಯನ ಮಾಡಬೇಕಾಧ **OERs** |
|---|
| 1.<br>2.<br>3. |

| **ಮುಂದಿನ ವರ್ಷಗಳಲ್ಲಿ ಓದಬೇಕಾದ OERs** |
|---|
| 1.<br>2.<br>3.<br>4.<br>5. |

| ಅಧ್ಯಯನಕ್ಕೆ ಮತ್ತು ಕಲಿಕೆಗೆ ಹೇಗೆ ವೇಳೆಯನ್ನು ಹೊಂದಿಸಿಕೊಳ್ಳಲಿ? |
|---|
| |

| ನಾನು ಯೋಜನೆಯನ್ನು ಮಾಡುವಾಗ ಬರುವ ಅಂಶಗಳೇನು? |
| --- |
| |

| ನನ್ನ ಯೋಜನೆಯ ಯಾವುದೇ ಹಾಳುಮಾಡುವ ಅಂಶಗಳನ್ನು ಹೇಗೆ ದೂರಮಾಡಲಿ |
| --- |
| |

| ನಾನು ನನಗಾಗಿ ಹೇಗೆ ಘಟಕಗಳನ್ನು ಹೊಂದುತ್ತೇನೆ? |
| --- |
| |

| ನನ್ನ ಕಲಿಕೆಯನ್ನು ನಾನು ಹೇಗೆ ಮೌಲ್ಯಮಾಪನ ಮಾಡಲಿ? ನನ್ನ ಕಲಿಕೆ ಮತ್ತು ನನ್ನ ಸಂದರ್ಭಗಳಲ್ಲಿ ಅನ್ವಯಿಸಿಕೊಳ್ಳಲು ಅಧ್ಯಯನದ ಸಹಭಾಗಿ ಅಥವಾ ಮಾರ್ಗದರ್ಶಿಯನ್ನು ಕಂಡುಕೊಳ್ಳಲು ಯಾವ ಸಿದ್ದತೆಗಳನ್ನು ಮಾಡಿಕೊಳ್ಳಲಿ. |
| --- |
| |

| ನನ್ನ ಕಲಿಕೆಯನ್ನು ನಾನು ಹೇಗೆ ಮೌಲ್ಯಮಾಪನ ಮಾಡಲಿ? |
| --- |
| |

# ಹೆಚ್ಚುವರಿ ಸಂಪನ್ಮೂಲಗಳು

- National Centre for School Leadership: http://www.nuepa.org/ncsl.html

# ಆಧಾರಗ್ರಂಥಗಳು/ಗ್ರಂಥಋಣ


Bruner, J. (1996) *The Culture of Education*. London: Harvard University Press.

Gardner, H. (1997) *Leading Minds: An Autonomy of Leadership*. London: HarperCollins.

Lave, J. and Wenger, E. (1991) *Situated Learning: Legitimate Peripheral Participation*. New York, NY: Cambridge University Press.

MacBeath, J. (1998) *Effective School Leadership: Responding to Change*. London: Paul Collins.

MacBeath, J. and Myers, K. (1999) *Effective School Leaders: How to Evaluate and Improve Your Practice*. Harlow: Pearson.

Shulman, L.S. and Shulman, J.H. (2007) 'How and what teachers learn: a shifting perspective', *Journal of Curriculum Studies*, vol. 36, no. 2, pp. 257–71. Available from: http://www.peaunesco.com.br/encontro2013/SHULMAN_How%20and%20What%20Teachers%20Learn_(JrCurriculumStudies_2004).pdf (accessed 27 January 2015).

Tyagi, R.S. (2011) *Academic Supervision in Secondary Schools: School-based Approach for Quality Management*. New Delhi: NUPEA.

Wenger, E. (1998) *Communities of Practice: Learning, Meaning and Identity*. New York, NY: Cambridge University Press.


# ಂಛಿಞಾಟಿಡಿಟಿಜಜ್ರಾಜ್ಞಾಜ್ಞಿಣ


Except for third party materials and otherwise stated below, this content is made available under a Creative Commons Attribution-ShareAlike licence (http://creativecommons.org/licenses/by-sa/3.0/). The material acknowledged below is Proprietary and used under licence for this project, and not subject to the Creative Commons Licence. This means that this material may only be used unadapted within the TESS-India project and not in any subsequent OER versions. This includes the use of the TESS-India, OU and UKAID logos.



Grateful acknowledgement is made to the following sources for permission to reproduce the material in this unit:

Table 1: adapted from: Gardner, H. (1997) *Leading Minds: An Autonomy of Leadership*. London: HarperCollins.

Table 2: adapted from Shulman, L.S. and Shulman, J.H. (2007) 'How and what teachers learn: a shifting perspective', *Journal of Curriculum Studies*, vol. 36, no. 2, pp. 257–71.

Table R2.1: adapted from: MacBeath, J. and Myers, K. (1999) *Effective School Leaders: How to Evaluate and Improve Your Practice*. Harlow: Pearson.

Every effort has been made to contact copyright owners. If any have been inadvertently overlooked the publishers will be pleased to make the necessary arrangements at the first opportunity.

Video (including video stills): thanks are extended to the teacher educators, headteachers, teachers and students across India who worked with The Open University in the productions.